ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 30th July, 1980/Shravana 8, 1902 S.E.

The House met in the Assembly Chamber, Vidhana Soudha, at Eleven of the Clock.

[MR. SPEAKER (SRI P. VENKATARAMANA) in the Chair.]

Representation Regarding

Farmer's agitation in Naragund and Navalgund Taluks, Dharwar District.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಧರಣಿ ಮುಷ್ಕರವನ್ನು ವಿರೋಧ ಪಕ್ಷದ ಸದಸ್ಯರಾದ ನಾವು ನಡೆಸಿದ್ದೇವೆ. ನಾವು ಧರಣಿ ಮುಷ್ಕರವನ್ನು ಮಾಡಲೇ ಬೇಕೆಂದು, ನಮ್ಮ ಉದ್ದೇಶವೇನೂ ಇರಲಿಲ್ಲ. ಆದರೆ ೨೧-೭-೧೯೮೦ನೇ ತಾರೀಖಿನಿಂದ...

ಅಧ್ಯಕ್ಷರು.—ವಿಷಯಕ್ಕೆ ಬನ್ನಿ...

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ೨೧-೭-೧೯೮೦ ರಿಂದ ಕರ್ನಾಟಕದಲ್ಲಿ ರೈತರ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿಯ ಪರಿಣಾಮ ಏನಾಯಿತು ಎಂಬುದರ ಬಗ್ಗೆ ನಾನು ವಿಷದವಾಗಿ ಹೇಳತಕ್ಕಂಥದ್ದು ಅನಾವಶ್ಯಕ. ರೈತರು ಮತ್ತು ಬಳಕೆದಾರರು ರಾಜ್ಯದ ಮುಂದೆ ಏನು ಬೇಡಿಕೆಗಳನ್ನು ಇಟ್ಟಿದ್ದಾರೆ, ಅವರ ಸಂಕಷ್ಟಗಳನ್ನೇನು ಸರ್ಕಾರದ ಮುಂದಿಟ್ಟಿದ್ದಾರೆ—ಅವೆಲ್ಲವೂ ಕೂಡ ಇಲ್ಲಿ ಎಲ್ಲರಿಗೂ ಮನವರಿಕೆ ಆಗಿರತಕ್ಕ ಬೇಡಿಕೆಗಳಾಗಿವೆ. ಭೂ ಮಾಲೀಕರು ಮತ್ತು ರೈತರು ಅವರ ಕಷ್ಟ-ಕಾರ್ಪಣ್ಯಗಳನ್ನು ಅನೇಕಸಾರಿ ಅಧಿಕಾರಿಗಳ ಮುಂದೆ ನಿವೇದನೆ ಮಾಡಿಕೊಂಡಿದ್ದಾಗ್ಯೂ ಸಹ ಅವರು ಈ ಬಗ್ಗೆ ಏನೂ ಮಾಡದಿದ್ದಾಗ ನಿರಾಶೆ ಹೊಂದಿದಂಥ ಅವರು ಬೇರೆ ಗತ್ಯಂತರವಿಲ್ಲದೆ ಈ ಅವಕಾಶವನ್ನು ಉಪಯೋಗಿಸಿಕೊಂಡು ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ರೈತರ ಈ ಒಂದು ಚಳುವಳಿ ಎಲ್ಲರ ಕಣ್ಣುಗಳನ್ನು ತೆರೆಸಿದೆ, ಸರ್ಕಾರದವರ ಗಮನವನ್ನು ಸೆಳೆದಿದೆ ಮತ್ತು ವಿರೋಧಪಕ್ಷದವರ ಗಮನವನ್ನು ಸಹ ಸೆಳೆದಿದೆ. ಈ ಚಳುವಳಿಯ ಹಿನ್ನೆಲೆಯಲ್ಲಿ ರೈತರಿದ್ದಾರೆ, ಬಳಕೆದಾರರಿದ್ದಾರೆ, ಕಾರ್ಮಿಕ ವರ್ಗದವರಿದ್ದಾರೆ ಮತ್ತು ಬಡವರಿದ್ದಾರೆ. ಏಕಾಏಕಿ ಇಂಥ ಜನ ಬೇಸತ್ತು ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ ನನಗೆ ಬಹಳ ಸಂತೋಷವಾಯಿತು. ಸರ್ಕಾರದ ಕಡೆಯಿಂದ ಮಾತನಾಡತಕ್ಕ ಮಾನ್ಯ ಸದಸ್ಯರು ಇದಕ್ಕೆ ಯಾರಿಂದಲೂ ರಾಜಕಾರಣ ಬಂದಿಲ್ಲ ಎನ್ನತಕ್ಕದ್ದನ್ನು ಒಪ್ಪಿಕೊಂಡಿದ್ದಾರೆ. ಆದುದರಿಂದ ಇದರಲ್ಲಿ ರಾಜಕಾರಣವೇನೂ ಇಲ್ಲ. ದಿನೇ ದಿನೇ ಜನ ಬೇಸತ್ತು ಯಾವ ರೀತಿಯಲ್ಲಿ ವರ್ತನೆ ಮಾಡಿದ್ದಾರೆ ಎಂಬುದು ಸರ್ಕಾರಕ್ಕೂ ಸಹ ಇವತ್ತು ಮನವರಿಕೆಯಾಗಿದೆ. ಆದುದರಿಂದ ಸರ್ಕಾರದವರು ಈಗಲಾದರೂ ಅವರ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಬೇಡಿಕೆಗಳು ಬಹಳ ದಿವಸಗಳಿಂದಲೂ ಇದ್ದವು ಅವು ಸರ್ಕಾರದವರ ಗಮನಕ್ಕೆ ಬಂದಿದ್ದರೂ ಸಹ ಅವುಗಳನ್ನು ಹಿಂದಿನ ಸರ್ಕಾರದವರು ಬಗೆಹರಿಸಿದರೋ ಬಿಟ್ಟರೋ ಎನ್ನುವುದರ ಬಗ್ಗೆ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಅವು ಹಿಂದಿನ ಸರ್ಕಾರದವರ ಗಮನಕ್ಕೆ ಬಂದಿದ್ದರೂ ಸಹ ಬಗೆಹರಿಸದೇ ಇರಬಹುದು, ಬಗೆಹರಿಸಿಲ್ಲವೆಂದೇ ಇಟ್ಟುಕೊಳ್ಳೋಣ, ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ, ಈಗ ನೀವಾದರೂ ಅದನ್ನು ಕಿವಿಗೆ ಹಾಕಿಕೊಂಡು ಅವುಗಳನ್ನು ಬೇಗ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡು

ವುದು ಬಹಳ ಅವಶ್ಯವೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಈಗ ನಿಮ್ಮ ಸರ್ಕಾರ ವಿದೆ, ನೀವು ಜವಾಬ್ದಾರಿ ಸ್ಥಾನದಲ್ಲಿದ್ದೀರಿ, ಜನಗಳ ಬೇಡಿಕೆಗಳನ್ನು ಕೇಳಿಬಿಟ್ಟು ಅವರಿಗೆ ಪರಿಹಾರವನ್ನು ಒದಗಿಸಿಕೊಡತಕ್ಕ ಸ್ಥಾನದಲ್ಲಿದ್ದೀರಿ. ಆದುದರಿಂದ ನೀವು ಆ ಕೆಲಸವನ್ನು ಮಾಡಬೇಕು. ಹಿಂದಿನವರು ಯಾರೋ ಇದ್ದರೆ, ಅವರ ಬಗ್ಗೆ ದೋಷಾರೋಪಣೆಗಳನ್ನು ಮಾಡುತ್ತಾ, ಅವರು ಭರವಸೆ ಕೊಟ್ಟಿದ್ದರು, ಅವರು ಮಾಡಲಿಲ್ಲ, ಎಂದು ಸರ್ಕಾರ ಮೈಮರೆತು ಕುಳಿತುಕೊಳ್ಳತಕ್ಕ ಪ್ರಶ್ನೆ ಇಲ್ಲವೆಂದು ನಾನು ತಮ್ಮ ಮುಖಾಂತರ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ಇಲ್ಲಿ ಅಧಿವೇಶನ ಸೇರಿರುವಾಗ ಅಲ್ಲಿ ರೈತರು ಚಳುವಳಿ ಮಾಡಿದ್ದಾರೆ. ಅವರ ಕಷ್ಟಕಾರ್ಪಣ್ಯಗಳೇನು ಎಂಬುದನು ತಿಳಿದು ಅದನ್ನು ಪರಿಹಾರ ಮಾಡುವುದಕ್ಕೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ನಾವು ಪ್ರಯತ್ನ ಮಾಡಲೇ ಬೇಕಾಗುತ್ತದೆ. ಅದು ಒಂದು ಕರ್ತವ್ಯದ ದೃಷ್ಟಿಯಿಂದ ಮತ್ತು ಜವಾಬ್ದಾರಿಯ ದೃಷ್ಟಿಯಿಂದ ತಮ್ಮ ಗಮನಕ್ಕೆ ತರಲೇಬೇಕೆಂದು ಹೇಳಿ ನಾವು ಪಣ ತೊಟ್ಟಿದ್ದೇವೆ ಮತ್ತು ಸಂಕಲ್ಪ ಮಾಡಿದ್ದೇವೆ, ಆದಕ್ಕಾಗಿ ನಿನ್ನೆ ಇವತ್ತು ಧರಣಿ ಮುಷ್ಕರವನ್ನು ಹೂಡಿದ್ದೇವೆ. ನಾವು ಅವರ ಪರವಾಗಿ ಕೆಲವು ಬೇಡಿಕೆಗಳನ್ನು ತಮ್ಮ ಮುಂದಿಟ್ಟಿದ್ದೇವೆ. ನಾವು ಯಾರೂ ಅಲ್ಲಿಗೆ ಹೋಗಿ ಕೇಳಿಕೊಂಡು ಬಂದಿಲ್ಲ, ಆದರೆ ನಮ್ಮ ಕಡೆಯ ಕೆಲವು ಮಾನ್ಯ ಸದಸ್ಯರುಗಳು ಮಾತ್ರ ಅಲ್ಲಿಗೆ ಹೋಗಿ ಅವರ ಕಷ್ಟಕಾರ್ಪಣ್ಯಗಳು ಏನು ಎಂಬುದನ್ನು ಕೇಳಿಕೊಂಡು ಬಂದಿದ್ದಾರೆ. ಅವರ ಕಷ್ಟಗಳೇನು ಎಂಬುದು ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿದೆ. ಅದು ತಮಗೂ ಕೂಡ ಮನವರಿಕೆಯಾಗಿದೆ, ಮತ್ತೆ ಕೆಲವರಿಗೆ ಬಹಳ ವರ್ಷಗಳಿಂದ ಜವಾಬ್ದಾರಿ ಸ್ಥಾನದಲ್ಲಿದ್ದುದರಿಂದ, ಅವರ ಕಷ್ಟವೇನೆಂಬುದು ಈಗಾಗಲೇ ಮನವರಿಕೆಯಾಗಿದೆ, ಆದಕ್ಕೋಸ್ಕರವೇ ಆದಕ್ಕೆ ಸರ್ಕಾರದವರು ಶೀಘ್ರವಾಗಿ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆನ್ನುವ ದೃಷ್ಟಿಯಿಂದ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕಾಗಿ ಧರಣಿ ಮುಷ್ಕರವನ್ನು ನಾವು ಮಾಡಿದ್ದೇವೆ. ಮತ್ತೆ ನಿನ್ನೆ ದಿವಸ ಮಾಡಿರತಕ್ಕ ಮುಷ್ಕರವನ್ನು ಪುನಃ ಮುಂದುವರಿಸಿಕೊಂಡು ಹೋಗುತ್ತೇವೆಂದು ಸಹ ಹೇಳಿದ್ದೇವೆ, ಆದರೆ ಇವತ್ತು ನಾವು ಏತಕ್ಕೆ ನಮ್ಮ ನಮ್ಮ ಸ್ಥಾನಗಳಲ್ಲಿ ಕುಳಿತುಕೊಂಡಿದ್ದೇವೆ ಎಂದರೆ, ಮಾನ್ಯ ಅಧ್ಯಕ್ಷರವರು ನಮ್ಮೆಲ್ಲರನ್ನೂ ಕರೆಸಿದ್ದರು, ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಅವರ ಸಹೋದ್ಯೋಗಿಗಳನ್ನು ಕರೆಸಿ ಮಾತುಕತೆ ನಡೆಸಿದರು. ಆಗ ನಾವು ಕೆಲವಾರು ಬೇಡಿಕೆಗಳನ್ನು ರೈತರ ಪರವಾಗಿ, ಬಳಕೆದಾರರ ಮತ್ತು ಬಡವರ ಪರವಾಗಿ ಇಟ್ಟಿದ್ದೇವೆ, ಆದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಹ ಒಪ್ಪಿದ್ದಾರೆ. ಆ ರೀತಿ ಆದ ಒಪ್ಪಂದದ ಮೇಲೆ ನಾವು ಪುನಃ ಧರಣಿ ಮುಷ್ಕರವನ್ನು ಮುಂದುವರಿಸತಕ್ಕಂಥದ್ದು ಸರಿಯಲ್ಲವೆಂದು ನಮಗೆ ಮನವರಿಕೆಯಾದುದರಿಂದ ನಾವು ಎಲ್ಲಾ ಮಾನ್ಯ ಸದಸ್ಯರುಗಳೂ ಒಂದು ನಿರ್ಣಯಕ್ಕೆ ಬಂದು, ನಮ್ಮ ಈ ಒಂದು ಬೇಡಿಕೆಗಳೇನಿವೆ ಅದನ್ನು ಈ ಸದನದಲ್ಲಿ ಪ್ರಕಟಣೆ ಮಾಡಬೇಕು, ಆದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ಹೇಳಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಆ ಒಪ್ಪಂದದ ಫಲವಾಗಿ ನಮ್ಮ ಸ್ನೇಹಿತರೆಲ್ಲಾ ವಾಪಸ್ಸು ಬಂದು ನಮ್ಮ ನಮ್ಮ ಸೀಟ್‌ಗಳಲ್ಲಿ ಕುಳಿತುಕೊಂಡು ಈ ಒಂದು ನಡವಳಿಕೆಯಲ್ಲಿ ಸಹಕಾರ ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಅಂದರೆ ನಾವು ಪೂರ್ತಿಯಾಗಿ ಧರಣಿ ಮುಷ್ಕರವನ್ನು ಬಿಟ್ಟುಬಿಟ್ಟಿದ್ದೇವೆ ಎಂದು ಯಾರೂ ಆ ಭಾವನೆಯಿಂದ ತಪ್ಪಾಗಿ ತಿಳಿದುಕೊಳ್ಳಬಾರದು.

ಇಷ್ಟು ಹೇಳಿ, ನಾವೇನು ಬೇಡಿಕೆಗಳ ಬಗ್ಗೆ ಒಂದು ಒಪ್ಪಂದ ಮಾಡಿಕೊಂಡಿದ್ದೇವೆ ಆ ಬೇಡಿಕೆಗಳನ್ನು ಈ ಸದನದ ಮುಂದಿಡುವುದಕ್ಕೆ ನಾನು ಇಷ್ಟಪಡುತ್ತೇನೆ.

The following are our demands :

11-30 P.M.

1. Judicial enquiry into the circumstances leading to the firing and resulting in deaths in Nargund and Navalgund and in other places where deaths have taken place due to firing since 21-7-1980 should be ordered and enquiry should be conducted by the High Court Judges:

2. To take effective and immediat steps including that of taking actions against the hoarders blackmarketers and smugglers under the provisions of preventive Detention Act and other Acts, if necessary by amending the Act;

3. To constitute a House Committee consisting of Members of both the Houses to go into the demands of the farmers and of the anti-price rise agitators. The Committee should given an interim as well as final recommendation on all demands and suggest measures for giving immediate and permanent relief;

4. Indiscriminate use of police force which is being continued for the last one week should be stopped and they should be warned to conduct themselves with restraint;

5. Release of the Office-bearers of the Farmers' Association of the Malaprabha Project Area and other innocent persons arrested. Charge sheet should be immediately identified and released unconditionally. The representatives of the farmers and achkatdars of Malaprabha and Gathaprabha Command Areas should be invited for talks;

6. Demands made by the Legislators in both the Houses during the debate regarding the relief to be given to the farmers be announced by the Government as promised earlier, and

7. Commission of enquiry to go into the charges levelled against the Minister for Food and Civil Supplies be ordered and he should be dropped from the Cabinet.

ಈ ಒಂದು ಬೇಡಿಕೆಗಳನ್ನು ನಾವೇನು ಇಲ್ಲಿ ಇಟ್ಟಿದ್ದೇವೆ, ಇವುಗಳನ್ನು ಸರ್ಕಾರದವರು ಬಹು ಮಂದಿ ಒಪ್ಪಿದ್ದಾರೆ. ಈಗ ನಮ್ಮ ಮುಖಂಡರುಗಳು ಮಾತನಾಡುವವರಿದ್ದಾರೆ. ಅವರುಗಳು ಮಾತನಾಡಿದ ಬಳಿಕ ಮಾನ್ಯ ಮುಖ್ಯ ಮಂತ್ರಿಯವರು ಇದಕ್ಕೆ ಉತ್ತರ ಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ರೈತ ಮತ್ತು ಕೂಲಿಗಾರರ ಚಳುವಳಿ ಕಳೆದ ಒಂದು ವಾರದಿಂದ ಈ ರಾಜ್ಯದಲ್ಲಿ ಉಗ್ರ ಸ್ವರೂಪವನ್ನು ತಾಳಿದೆ. ಕಳೆದ ೨-೩ ವರ್ಷಗಳಿಂದ ರೈತರ ಜೊತೆಗೆ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಸೇರಿಕೊಂಡು ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ನಾನಾ ರೀತಿಯಿಂದ ಒತ್ತಾಯಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಸರ್ಕಾರಿ ಅಧಿಕಾರಿಗಳ ಮೇಲೆ ಮತ್ತು ಸಂಬಂಧಪಟ್ಟ ಮಂತ್ರಿಗಳ ಮೇಲೆ ಕೂಡ ಈ ಬೇಡಿಕೆಯ ತೀವ್ರತೆಯನ್ನು ಬಿಂಬಿಸಿ ಪರಿಹಾರ ಕಂಡುಹಿಡಿಯಲಿಕ್ಕೆ ಕಳೆದ ೩-೪ ವರ್ಷಗಳಿಂದ ನಾವು ಪ್ರಯತ್ನ ಮಾಡಿದ್ದೇವೆ. ಚಳುವಳಿ ಎಂದರೆ ಏನೇನೋ ಒಂದು ನಿರ್ಣಯಗಳನ್ನು ಮಾಡುವುದು ಅಲ್ಲ. ನಾವು ಸಾವಿರಾರು ಜನ ರೈತರನ್ನು ಕರೆದುಕೊಂಡು ಮೆರವಣಿಗೆ ಮಾಡಿ ತಹಸೀಲ್ದಾರರ ಕಛೇರಿಗಳಿಗೆ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ಹೋಗಿದ್ದೇವಲ್ಲದೆ ಮಂತ್ರಿಗಳನ್ನು ಸಹ ಭೆಟ್ಟಿಯಾಗಿದ್ದೇವೆ. ಆದರೂ ನಮಗೆ ಇಲ್ಲಿಯವರೆಗೆ ಪರಿಹಾರ ಸಿಗಲಿಲ್ಲ. ಒಂದು ಸರಿಯಾದ ರೀತಿಯ ಉತ್ತರ ಕೂಡ ಸರ್ಕಾರದಿಂದ ನಮಗೆ ಬರಲಿಲ್ಲ. ಇದಾದಮೇಲೆ ಇತ್ತೀಚೆಗೆ ರೈತರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಮತ್ತು ಅಧಿಕಾರಿಗಳ ಮುಂದೆ ಇಟ್ಟರು. ನಾನೂ ಕೂಡ ಅದೇ ವಿಚಾರವನ್ನು ಈ ಸದನದ ಪ್ರಾರಂಭವಾದ ಮೇಲೆ ೩ ಸಾರಿ ಈ ಸದನದಲ್ಲಿ ಎತ್ತಿದ್ದೇನೆ.

ನಾನು ಆಯುವ್ಯಯದ ಬಗ್ಗೆ ಮಾತನಾಡುವಾಗ ಹೇಳಿದೆ, ರೂಲ್ ೩೧ರ ಕೆಳಗೆ ಚರ್ಚೆ ಮಾಡಿದಾಗ ಮಾನ್ಯ ಕಂದಾಯ ಮಂತ್ರಿಗಳ ಅವಗಾಹನೆಗೆ ತಂದೆ, ವ್ಯವಸಾಯ ಮತ್ತು ಕಂದಾಯ ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡುವಾಗ ಪುನ: ನಾನು ಅದನ್ನು ಬಹಳ ಒತ್ತಿ ಹೇಳಿದೆ. ಆದರೆ ದುರ್ದೈವ ದಿಂದ ಅಧಿಕಾರಿಗಳು ಮತ್ತು ಸರ್ಕಾರ ಜನರ ಬೇಡಿಕೆಗಳ ಬಗ್ಗೆ ಎಳ್ಳಷ್ಟೂ ಬೆಲೆ ಕೊಡದೆ ನಿರ್ಲಕ್ಷ್ಯತನದಿಂದ ನಡೆದದ್ದರಿಂದ ಇಂಥ ಚಳುವಳಿ ಪ್ರಾರಂಭವಾಗಿ ಉಗ್ರ ರೂಪಕ್ಕೆ ಹೋಯಿತು ಎಂದು ನಾನು ಸ್ಪಷ್ಟ ವಾಗಿ ಹೇಳಬಯಸುತ್ತೇನೆ. ಅವರ ಒಂದು ನಿರ್ಲಕ್ಷ್ಯತನದಿಂದ, ಅಸಡ್ಡೆತನದಿಂದ ಇವತ್ತು ಈ ಪರಿಸ್ಥಿತಿಗೆ ಹೋಗಿದೆ. ಅದು ಏನೇ ಆಗಲಿ ಇವತ್ತು ಸರ್ಕಾರ ನಮ್ಮ ಬೇಡಿಕೆಗಳಿಗೆ ಮನ್ನಣೆ ಕೊಡದೆ ಇರುವಾಗ ನನಗೆ ಪುರಾಣದ ಒಂದು ಕಥೆ ನೆನಪಾಗುತ್ತದೆ. ಅದೇನೆಂದರೆ, ಶಿಶುಪಾಲ ನೂರು ತಪ್ಪು ಮಾಡಿದರೂ ಶ್ರೀಕೃಷ್ಣ ಸುಮ್ಮನೆ ಇದ್ದನಂತೆ ೧೦೧ನೇ ತಪ್ಪು ಮಾಡಿದಾಗ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡನಂತೆ ಹೀಗೇ ಪರಮಾತ್ಮನೇ ತಾಳ್ಮೆ ತಪ್ಪಿದಾಗ, ಒಂದು ರೀತಿಯಾದ ಉಗ್ರ ಕ್ರಮ ತೆಗೆದುಕೊಂಡ ಉದಾಹರಣೆಗಳು ನಮ್ಮ ಮುಂದಿವೆ. ಅದೇ ರೀತಿ, ಸರ್ಕಾರ ಅವರ ಬೇಡಿಕೆ ಗಳಿಗೆ ಕಿವಿಗೊಡದೇ ಇದ್ದಾಗ ರೈತಾಪಿ ಜನ ಇಂಥ ಚಳುವಳಿಗೆ ಕೈಹಾಕಿದ್ದಾರೆ. ನಾವು ನಿನ್ನೆ ದಿವಸ ಮಾಡಿದ ಧರಣಿಯನ್ನು ಸರ್ಕಾರದವರು ತಪ್ಪಿಸಬಹುದಾಗಿತ್ತು. ನಾವು ಅನೇಕ ರೀತಿಯಿಂದ ಸಹಕಾರ ಕೊಟ್ಟು ಮಾತುಕತೆ ನಡೆಸಿದ ಬಳಿಕ ನಮ್ಮ ಹೇಳಿಕೆಯ ಪ್ರಕಾರ, ಯಾವ ರೀತಿ ನ್ಯಾಯಾಂಗ ವಿಚಾರಣೆ ಮಾಡುತ್ತೇವೆಂಬ ಬಗ್ಗೆ ಸರ್ಕಾರ ಹೇಳಿಬಿಟ್ಟಿದ್ದರೆ ಕಳೆದ ೪-೬ ದಿನಗಳಿಂದ ಅದಂತಹ ದುರ್ಘಟನೆಗಳನ್ನು ತಪ್ಪಿಸಬಹುದಾಗಿತ್ತು, ಇವತ್ತಿಗೂ ಕೂಡ ನಾನು ಅದನ್ನೇ ನಂಬಿದ್ದೇನೆ. ಸರ್ಕಾರ ಯಾವಾಗ ಕುರುಡಾಯಿತೋ, ಕಿವುಡಾಯಿತೋ, ಮೂಕಾಯಿತೋ ಆಗ ನಾವು ಜನರ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯಚ್ಯುತಿಯಾಗಬಾರದು. ಜನರ ತೀವ್ರತರವಾದ ಭಾವನೆಗಳನ್ನು ಪ್ರತಿಬಿಂಬಿಸಬೇಕು. ಕಿವುಡಾ ದದ್ದನ್ನು ಕೇಳುವಂತೆ ಮಾಡಬೇಕು. ಮೂಕಾದದ್ದನ್ನು ಮಾತನಾಡುವಂತೆ ಮಾಡಬೇಕು. ಕುರುಡಾದ ದ್ದನ್ನು ನೋಡುವಂತೆ ಮಾಡಬೇಕೆಂಬ ಉದ್ದೇಶದಿಂದ ನಿನ್ನೆ ದಿವಸ ಧರಣಿ ಮಾಡಿದೆವು ಇವತ್ತು ಸರ್ಕಾರ ಅನೇಕ ವಿಚಾರಗಳನ್ನು ಕೇಳಿಕೊಂಡು ಕೊನೆಗಾದರೂ ಕಣ್ಣು ತೆರೆದಿದೆ. ಮಾನ್ಯ ಮುಖ್ಯ ಮಂತ್ರಿಯವರು ವಿಚಾರಗಳನ್ನು ತಿಳಿದುಕೊಂಡು ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಒಪ್ಪಿ ಕೊಂಡಿದ್ದಾರೆ. ಪುನಃ ನಾವು ಆ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದು ಅನಾವಶ್ಯಕ. ಈ ರಾಜ್ಯದಲ್ಲಿ ಚಳುವಳಿ ನಿಲ್ಲಬೇಕು, ಶಾಂತತೆ ಪರಿಪಾಲನೆಯಾಗಬೇಕು, ಜನರ ಬೇಡಿಕೆಗಳು ಈಡೇರಬೇಕು-ಈ ಎಲ್ಲ ದೃಷ್ಟಿಯಿಂದ ನಾವು ಸಹಕಾರ ನೀಡುತ್ತೇವೆಂದು ಇಲ್ಲಿಗೆ ಧರಣಿಯನ್ನು ಮುಕ್ತಾಯ ಮಾಡಿ ನಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ.

ಶ್ರೀ ಬಿ.ವಿ. ಕಕ್ಕಿಲಾಯ (ವಿಠ್ಠಲ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಿನ್ನೆ ನಾವು ಏನು ಧರಣಿ ಸತ್ಯಾಗ್ರಹ ಮಾಡಲಿಕ್ಕೆ ಆರಂಭ ಮಾಡಿದೆವು, ಇದಕ್ಕೆ ಮುಖ್ಯವಾದ ಕಾರಣವೆಂದರೆ ಹೊರಗಡೆ ಆದ ರೈತರ ಚಳುವಳಿಯ ಪ್ರತಿಬಿಂಬವನ್ನು ಈ ಸದನದಲ್ಲಿ ಈ ಒಂದು ರೂಪದಲ್ಲಿ ಮಾಡಿದೆವು ಎಂಬು ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅಪೇಕ್ಷೆಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ, ಬಹಳ ಕಾಲದಿಂದ ರೈತರಲ್ಲಿ ತುಂಬಿ ಬಂದಂತ ನೋವು ಏನಿತ್ತು ಅದು ಸ್ಫೋಟಗೊಂಡು ಚಳುವಳಿಯ ರೂಪ ದಲ್ಲಿ ನಡೆಯುತ್ತಿದೆ. ಅದನ್ನು ಪರಿಹರಿಸುವ ಸಲುವಾಗಿ ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ನಾವು ಅನೇಕ ಸಲಹೆಗಳನ್ನು ಕೊಟ್ಟರೂ ಸಹ ಇದುವರೆಗೆ ಇದ್ದಂತಹ ಯಾವ ಸರ್ಕಾರವೂ ಅದರ ಬಗ್ಗೆ ಗಮನ ಕೊಡಲಿಲ್ಲ. ಆದುದರಿಂದ, ಆಲ್ಲಿ ಒಂದು ಸ್ಫೋಟಕ ಪರಿಸ್ಥಿತಿ ಉದ್ಭವವಾಯಿತು. ಅದೇ ರೀತಿ, ಬೆಲೆ ಏರಿಕೆಯ ಸಮಸ್ಯೆ ಕೂಡ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಈ ಬೆಲೆ ಏರಿಕೆಯ ಪ್ರಶ್ನೆ ಇವತ್ತು ಹಳ್ಳಿಹಳ್ಳಿಗಳಿಗೆ ಎಷ್ಟರಮಟ್ಟಿಗೆ ಹೋಗಿದೆ ಎಂದರೆ ಹಳ್ಳಿಯ ಜನರು ಉಪಯೋಗಿಸು ವಂತಹ ಪ್ರತಿಯೊಂದು ಪದಾರ್ಥಗಳ ಬೆಲೆಯೂ ಏರಿದೆ. ಒಂದು ಗುಳದ ಬೆಲೆ ೨೦-೨೨ ರೂಪಾಯಿ ಆಗಿದೆ. ಬೇಳೆಕಾಳುಗಳ ಬೆಲೆ ಜಾಸ್ತಿಯಾಗಿದೆ. ಹೀಗೆ ಎಲ್ಲ ವಸ್ತುಗಳ ಬೆಲೆ ಜಾಸ್ತಿಯಾಗಿ ಅದೂ ಕೂಡ ಸ್ಫೋಟಗೊಳ್ಳುವ ಪರಿಸ್ಥಿತಿಗೆ ಬಂದಿದೆ. ಇದರ ಪರಿಣಾಮವನ್ನು ನಾವು ಹೊರಗಡೆ ನೋಡು ತ್ತಿದ್ದೇವೆ. ಅಲ್ಲಿ ಇನ್ನೂ ಈ ಚಳುವಳಿಗಳು ಮುಂದುವರಿಯುತ್ತಿವೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ನಾನು ತರುತ್ತಿದ್ದೇನೆ. ಸರ್ಕಾರದ ಗಮನಕ್ಕೆ ಸಮಸ್ಯೆಗಳನ್ನು ತರುವಾಗ ಚಳುವಳಿ ಶಾಂತ ರೀತಿಯಿಂದ ನಡೆಯಬೇಕೆಂಬುದು ನಮ್ಮ ಉದ್ದೇಶ. ಎಲ್ಲರೂ ಸಂಘಟಿತರಾಗಿ ಚಳುವಳಿ ನಡೆಸುವುದಕ್ಕೆ ಹೆಚ್ಚಾಗಿ ವ್ಯವಸ್ಥೆಗಳನ್ನು ಎಲ್ಲಾ ಕಡೆಗಳಲ್ಲಿ ನಾವು ಮಾಡುತ್ತೇವೆ. ಆದರೆ

ಶಾಂತರೀತಿಯಿಂದ ಚಳುವಳಿ ನಡೆಸುವುದಕ್ಕೆ ಮತ್ತು ಜನರು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಇರುವ ಅವಕಾಶಗಳು ಕಡಿಮೆಯಾಗುತ್ತಿವೆಯೆಂಬುದನ್ನು ಕೂಡ ಈ ಸಂದರ್ಭದಲ್ಲಿ ನಾವು ಹೇಳಬೇಕಾಗಿದೆ. ಕಾರ್ಮಿಕರ ಪ್ರಶ್ನೆ ಇರಲಿ, ರೈತರ ಪ್ರಶ್ನೆ ಇರಲಿ, ಬೆಲೆ ಏರಿಕೆ ಪ್ರಶ್ನೆ ಇರಲಿ ಯಾವುದೇ ಸಮಸ್ಯೆ ಇರಲಿ, ಆ ಬಗ್ಗೆ ಶಾಂತ ರೀತಿಯಿಂದ ಚಳುವಳಿ ನಡೆಸಿದರೂ ಅದಕ್ಕೆ ಸೆಕ್ಷನ್ ೫೫ರಿಂದ ಹಿಡಿದು ಗೋಲಿಬಾರ್‌ತನಕ ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಜನರಿಗೆ ಉಸಿರು ಕಟ್ಟಿದಂತಾಗಿದೆ ದುರಾದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ. ಇದನ್ನು ಹತೋಟಿಗೆ ತರಬೇಕಾಗಿದ್ದರೆ ಈ ಪ್ರಶ್ನೆಗಳನ್ನು ಆದಷ್ಟು ಜಾಗ್ರತೆ ಪರಿಶೀಲನೆ ಮಾಡಿ ಪರಿಹಾರವನ್ನು ಕಂಡುಹಿಡಿದು ಅದನ್ನು ಕೊಡಬೇಕು. ಎರಡನೆಯದಾಗಿ ಕಾನೂನು ಮತ್ತು ಶಿಸ್ತು ಪರಿಪಾಲನೆ ಮಾಡುವವರು ಯಾರಿದ್ದಾರೆ ಅವರು ಶಿಸ್ತು ಮತ್ತು ಸಂಯಮದಿಂದ ವರ್ತಿಸುವಹಾಗೆ ಮತ್ತು ಜನರಿಗೆ ರಕ್ಷಣೆ ಕೊಡುವಂಥ ಮನೋಭಾವದಿಂದ ವರ್ತಿಸುವಹಾಗೆ ಸರ್ಕಾರ ಎಚ್ಚರಿಕೆಯನ್ನು ಕೊಡಬೇಕು, ಜನರ ಪ್ರತಿನಿಧಿಯಾಗಿ ಆರಿಸಿಬಂದಿರುವ ಪ್ರಜಾಪ್ರಭುತ್ವ ಸರ್ಕಾರವಾದ್ದರಿಂದ ಈ ಕೆಲಸವನ್ನು ಮಾಡುವುದು ಇದರ ಜವಾಬ್ದಾರಿಯಾಗಿದೆ. ಎಲ್ಲಾ ವಿರೋಧಪಕ್ಷಗಳ ಪರವಾಗಿ ಇವತ್ತು ಏಳು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗಿದೆ. ಇದನ್ನು ಪೂರ್ತಿಯಾಗಿ ಸರ್ಕಾರ ದವರು ಒಪ್ಪಿಕೊಳ್ಳಬೇಕು. ಒಪ್ಪಿಕೊಳ್ಳುತ್ತೀರಿ ಎಂಬ ನಂಬಿಕೆಯೂ ನನಗಿದೆ. ಕೊನೆಯ ಬೇಡಿಕೆ ಏನಿದೆ ಅದು ಬಹಳ ಮುಖ್ಯವಾದುದು. ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂಥ ಅದರ ಯಜಮಾನಿಕೆಯನ್ನು ಹೊತ್ತಂಥ ಮಾನ್ಯ ಮಂತ್ರಿಯವರು ಏನಿದ್ದಾರೆ ಅವರ ಆದಕ್ಷತೆ ಮತ್ತು ಅವರ ವರ್ತನೆಗಳು ಕೂಡಾ ಬೆಲೆ ಏರಿಕೆಯಾಗಿರುವುದಕ್ಕೆ ಕಾರಣವಾಗಿದೆ ಎಂಬುದನ್ನು ಮನಗಂಡು ಈ ಕೇಳಿಕೆಯನ್ನು ವಿರೋಧಪಕ್ಷದ ಪರವಿಯಿಂದ ಇಡಲಾಗಿದೆ. ವಿರೋಧ ಪಕ್ಷದವರು ಮುಂದಿಸಿರುವ ಈ ಎಲ್ಲಾ ಬೇಡಿಕೆಗಳಿಗೂ ತಾವು ಮನ್ನಣೆ ಕೊಡುತ್ತೀರಿ ಎಂದು ನಂಬಿ ಕೊಂಡು ಇವತ್ತು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ ಅದಕ್ಕನುಗುಣವಾಗಿ ಬರುತ್ತದೆ ಎಂಬ ವಿಶ್ವಾಸದಿಂದ ಮತ್ತು ಈ ಸದನದ ಅಭಿಪ್ರಾಯವನ್ನು ಒಪ್ಪುವಂತ ಮನಸ್ಸು ಮಾಡಿದ್ದರಿಂದ ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೇ, ರೈತರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಕಾನೂನುಬದ್ಧವಾಗಿ, ರಾಜ್ಯಾಂಗದತ್ತವಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡಿ ಇದುವರೆಗೆ ವಿರೋಧ ಪಕ್ಷದವರು ನಡೆಸಿದಂಥ ಹೋರಾಟ ಸರ್ಕಾರದ ಸಹಕಾರದಿಂದ ಯಶಸ್ವಿಯಾಗಿದೆ ಎಂಬುದನ್ನು ನಾವು ಮನಗಂಡಿದ್ದೇವೆ ಆದರೆ ನಾವು ಇವತ್ತು ಸರ್ಕಾರದ ಮುಂದೆ ಇಟ್ಟಿರತಕ್ಕ ಬೇಡಿಕೆಗಳು ರೈತರ ಸಂಪೂರ್ಣ ಸಮಸ್ಯೆಗಳನ್ನು ಬಗೆಹರಿಸುತ್ತದೆಂದಲ್ಲ, ಆದರೆ ಕ್ಷಣಿಕವಾದ ದುರ್ಘಟನೆ ಆಗುವುದಕ್ಕೆ ಕಾರಣ ಏನೇನಿತ್ತೋ ಅದನ್ನು ಬಗೆಹರಿಸುವುದಕ್ಕೆ ಸಾಧ್ಯವಾದೀತು ಎಂಬ ಭರವಸೆಯಿಂದ ವಿರೋಧಪಕ್ಷದ ಎಲ್ಲಾ ಮಾನ್ಯ ಸದಸ್ಯರೂ ಮನವಿಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಇದನ್ನು ಕಾರ್ಯಗತಗೊಳಿಸುವಾಗ ಯಾವುದೇ ಒತ್ತಡ ಅಥವಾ ಪ್ರಭಾವಕ್ಕೆ ಮಣಿದು ಹಿಂಜರಿಯಬಾರದು ಮತ್ತು ಬಗೆಹರಿಸುವುದರಲ್ಲಿ ಉತ್ಸುಕರಾಗಬೇಕು ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಈಗ ಇರತಕ್ಕಂಥ ಅತ್ಯಂತ ಗಹನವಾದ ವಿಷಯವೇನೆಂದರೆ ಸರ್ಕಾರೀ ಅಧಿಕಾರಿಗಳು ರೈತರ ಸಮಸ್ಯೆಗಳ ಬಗ್ಗೆ ಹೇಗೆ ನಡೆದುಕೊಳ್ಳುತ್ತಾರೆ ಎಂಬುದು. ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವದಿಂದಾಗಿ ಈ ದುರ್ಘಟನೆ ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇನ್ನು ಮುಂದೆ ಯಾವುದೇ ರೈತ ಏನಾದರೂ ಮನವಿಯನ್ನು ಸರ್ಕಾರದ ಮುಂದಿಟ್ಟಾಗ ಅಧಿಕಾರಿಗಳು ಯಾವ ರೀತಿ ವರ್ತಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಯಾರಿಗೆ ಸರ್ಕಾರೀ ಅಧಿಕಾರಿಗಳನ್ನು ಕಂಡು ನೋಡುವುದಕ್ಕಾಗುವುದಿಲ್ಲ. ಯಾರಿಗೆ ಮಂತ್ರಿಗಳನ್ನು ಮುಖ್ಯಮಂತ್ರಿಗಳನ್ನು ಕಂಡು ಬೇಟಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಂಥವರು ಅಕಸ್ಮಾತ್ತಾಗಿ ಪತ್ರ ಬರೆದರೆ ಅವರಿಗೆ ಸಹಾನುಭೂತಿಯಿಂದ ಉತ್ತರ ಕೊಡತಕ್ಕ ವ್ಯವಸ್ಥೆಯನು ಸರ್ಕಾರದವರು ತೀವ್ರವಾಗಿ ಮಾಡಬೇಕು. ರೈತರ ಸಮಸ್ಯೆಗಳನ್ನು ಕುರಿತು ಯಾವುದೇ ಪತ್ರ ಸರ್ಕಾರಕ್ಕೆ ಬಂದರೆ ಅದನ್ನು ತೀಕ್ಷ್ಣವಾಗಿ ಪರಿಶೀಲನೆ ಮಾಡಿ ಆ ಸಮಸ್ಯೆ ಬಗ್ಗೆ ತುರ್ತಾಗಿ ಗಮನಹರಿಸಿ ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ತಕ್ಷಣ ಉತ್ತರ ಕೊಡತಕ್ಕ ವ್ಯವಸ್ಥೆಯೂ ಆಗಬೇಕಾಗಿದೆ. ಇನ್ನು ಮುಂದಾದರೂ ವಿರೋಧಪಕ್ಷದವರ

ಸಹಕಾರವನ್ನು ತೆಗೆದುಕೊಂಡು ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ಗಳನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ದೇಶದಲ್ಲಿ ಇವತಕ್ಕ ರೈತರ ತೊಂದರೆಗಳನ್ನು ನಿವಾರಿಸುವುದಕ್ಕೆ ಶಾಶ ತವಾದ ಪರಿಹಾರವನ್ನು ಕಂಡುಹಿಡಿಯುವುದರಲ್ಲಿ ಈ ಸದನದ ಮಾನ್ಯ ಸದಸ್ಯರು ಒಗ್ಗೂಡಿ ಕೆಲಸ ಮಾಡಬೇಕಾಗಿದೆ. ಈ ದೃಷ್ಟಿಯಿಂದ ರೈತರ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ವಿರೋಧ ಪಕ್ಷದವರು ಏನು ಮನವಿಯನ್ನು ಸಲ್ಲಿಸಿದ್ದಾರೆ ಅದನ್ನು ನಡೆಸಿಕೊಡುತ್ತೀರಿ ಎಂಬ ವಿಶ್ವಾಸವನ್ನಿಟ್ಟು ಕೊಂಡು ಸರ್ಕಾರದೊಡನೆ ಸಹಕರಿಸುವ ಸಲುವಾಗಿ ಧರಣಿ ಮುಷ್ಕರವನ್ನು ನಿಲ್ಲಿಸಿದ್ದೇವೆ. ಆದ್ದರಿಂದ ಸರ್ಕಾರದವರು ಆದಷ್ಟು ಬೇಗ ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದು ಅನುಕೂಲ ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

SRI AZEEZ SAIT.– Sir, I am on a point of order. Just now, I noticed that some Officer entered into the premises of the Assembly and had certain discussion with Sri Yenkatappa, the Hon'ble Minister of State for Horticulture. May I know who was that gentleman?

MR. SPEAKER. The gentleman was the Additional Secretary of Karnataka Legislature Secretariat, Sri Singri Gowda. Therefore, there is no Point of order.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಯವರು). –ಮಾನ್ಯ ಅಧ್ಯಕ್ಷರೆ, ವಿಧಾನ ಸಭೆ ಕೊನೇ ಹಂತದಲ್ಲಿರಬೇಕಾದರೆ ನಮ್ಮ ವಿರೋಧ ಪಕ್ಷದ ಸ್ನೇಹಿತರೆಲ್ಲಾ.....

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ಅಧಿವೇಶನದ ಕೊನೇ ಹಂತವೋ ?

ಶ್ರೀ ಆರ್. ಗುಂಡೂರಾವ್.—ಏತಕ್ಕೆ ಗಾಬರಿ ಆಗುತ್ತೀರಿ ? (ನಗು)

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾವಲ್ಲ, ನಿಮ್ಮ ಕಡೆಯವರು ಗಾಬರಿಯಾದಾರು ಎಂದು ಹೇಳಿದೆ.

ಶ್ರೀ ಆರ್. ಗುಂಡೂರಾವ್.—ಗಾಬರಿಪಡಬೇಡಿ. ನಿಮಗೂ ಗಾಬರಿಯಾಗುತ್ತಿದೆ, ಸುಮ್ಮನೆ ಏತಕ್ಕೆ ಇಲ್ಲ ಎಂದು ಹೇಳುತ್ತೀರಿ ?

ಶ್ರೀ ಎಸ್.ಎಂ. ಶಿರಾ್ನಳಿ ಚಂದ್ರಶೇಖರ್.—ಮಾನ್ಯ ಕೆ.ಹೆಚ್. ಶ್ರೀನಿವಾಸ ಸಾಹೇಬರಿಗೆ ಗಾಬರಿ ಯಾಗುತ್ತಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಚುನಾವಣೆ ಎಂದರೆ ಎಲ್ಲರಿಗೂ ಗಾಬರಿ. (ನಗು)

ಶ್ರೀ ಆರ್. ಗುಂಡೂರಾವ್.—ಮಾನ್ಯ ಕೆ.ಹೆಚ್. ಶ್ರೀನಿವಾಸ್ ಅವರು ಹೇಳಿದಹಾಗೆ ಇವತ್ತು ಅಧಿವೇಶನದ ಕೊನೆ ದಿನ ಎಂದೇ ಹೇಳುತ್ತೇನೆ. ಅವರಿಗೆ ಏತಕ್ಕೆ ಸುಮ್ಮನೆ ಗಾಬರಿ ಮಾಡಲಿ ! ಕಳೆದ ಒಂದು ವಾರದಿಂದ ನಡೆದ ರೈತರ ಚಳುವಳಿ ಬಗ್ಗೆ ಮಾನ್ಯ ವಿರೋಧಪಕ್ಷದ ಉಪನಾಯಕರು ಮಾತನಾ ಡುತ್ತಾ ಹೇಳಿದರು, ಇದು ಬಹಳ ವರ್ಷಗಳಿಂದ ಇದ್ದಂಥ ಸಮಸ್ಯೆ ಎಂದು. ಬಹಳ ದಿವಸಗಳಿಂದ ಇದ್ದ ಸಮಸ್ಯೆ ಈಗ ಈ ಪರಿಸ್ಥಿತಿಗೆ ಬಂತು. ರೈತರ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಬಹಳ ನಿಧಾನ ವಾದ ದೆಸೆಯಿಂದ ಮತ್ತು ಅವರು ಅಧಿಕಾರಿಗಳನ್ನು, ಶಾಸಕರನ್ನು, ಮಂತ್ರಿಗಳನ್ನು, ಮುಖ್ಯಮಂತ್ರಿ ಗಳನ್ನು ಎಲ್ಲರನ್ನೂ ಹಿಂದೆ ಮತ್ತು ಈಗ ಭೇಟಿ ಮಾಡಿ ಮನವಿಗಳನ್ನು ಅರ್ಪಿಸಿದರೂ ಕೂಡ ಯಾವುದೇ ತರಹದ ಪರಿಹಾರ ದೊರೆಯದ ಕಾರಣದಿಂದ ಈ ಒಂದು ಪರಿಸ್ಥಿತಿ ಉದ್ಭವವಾಗುವುದಕ್ಕೆ ಕಾರಣ ವಾಯಿತು ಎಂದು ಮಾನ್ಯ ಬೊಮ್ಮಾಯಿಯವರು ಸಹ ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ವತಿಯಿಂದ ನಾಯಕರಾದ ಶ್ರೀ ಬಿ. ಬಸವಲಿಂಗಪ್ಪನವರು.....

ಶ್ರೀ ಬಿ. ಬಸವಲಿಂಗಪ್ಪ.—(ನಗು)

ಶ್ರೀ ಆರ್. ಗುಂಡೂರಾವ್.—ಏತಕ್ಕೆ ಸ್ವಾಮಿ ನಾಯಕರು ಎಂದರೆ ನಗುತ್ತೀರಿ ? ನೀವು ನಾಯಕರಾಗಿ, ನಮಗೂ ಸಂತೋಷ. ನಮಗೇನೂ ಬೇಜಾರಿಲ್ಲ.

ಶ್ರೀ ಡಿ.ಟಿ. ರಾಮು.—ಇಲ್ಲ, ಅವರು ಅದೇ ಜಾಗದಲ್ಲಿದ್ದರೆ ಒಳ್ಳೆಯದು.

†ಶ್ರೀ ಆರ್. ಗುಂಡೂರಾವ್.—ಮಾನ್ಯ ಬಿ. ಬಸವಲಿಂಗಪ್ಪನವರಿಗೆ ನಾಯಕರಾಗುತ್ತೇನೆ ಎಂದು ಸಂತೋಷವಾಗಿರಬಹುದು. ಸದ್ಯಕ್ಕೆ ಉಪನಾಯಕರಾಗಿ ವಿರೋಧಪಕ್ಷದ ವತಿಯಿಂದ ಕೆಲವು ಬೇಡಿಕೆ ನಮ್ಮ ಮುಂದಿಟ್ಟಿದ್ದಾರೆ. ನಿನ್ನೆ ದಿವಸ ಮಾಡಿದ ನನ್ನ ಭಾಷಣಗಳನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ ಇವರು ಇಟ್ಟಿರುವ ಬೇಡಿಕೆಗಳಲ್ಲಿ ಹೊಸದೇನೂ ಇಲ್ಲ. ಇದನ್ನೆಲ್ಲಾ ನಾನೇ ನಿನ್ನೆ ದಿವಸ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಏನೇನು ಮಾಡುತ್ತೇನೆ ಎಂದು ಹೇಳಿದ್ದೆನೋ ಅದನ್ನೇ ಇವರೂ ಹೇಳಿದ್ದಾರೆ. ಒಂದೇ ಒಂದು ವ್ಯತ್ಯಾಸವಿರುವುದು ಎಂದರೆ ತಾರೀಖಿನದು. ಇನ್ನೇನೂ ವ್ಯತ್ಯಾಸವಿಲ್ಲ. ತಾರೀಖಿನನ್ನೂ ಸಹ ಒಪ್ಪಂದ ಮಾಡಿ ತೀರ್ಮಾನ ಮಾಡಿತ್ತು. ಒಪ್ಪಂದ ಇಲ್ಲದೇ ತೀರ್ಮಾನ ಮಾಡಿರಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಜೆ. ಹೆಚ್. ಪಟೇಲ್ ಅವರು ಕೇಳಿದಾಗಲೂ ನಾನು ಉತ್ತರ ಕೊಟ್ಟಿದ್ದೇನೆ. ರೈತರ ಕಷ್ಟಗಳನ್ನು ನೋಡುವುದಕ್ಕೆ ಶಾಸಕರ ಸಮಿತಿ ಹೋಗಬೇಕು ಎಂಬುದನ್ನು ಹೇಳಿದಾಗ ನಾವು ನಮ್ಮ ವಿರೋಧವನ್ನು ವ್ಯಕ್ತಪಡಿಸಲಿಲ್ಲ. ಶಾಸಕರ ಸಮಿತಿ ಅಲ್ಲಿಗೆ ಹೋಗಬೇಕು ಎಂದು ಸ್ಪಷ್ಟವಾಗಿ ನಾನು ಹೇಳಿದೆ. ಎಲ್ಲೆಲ್ಲಿ ನಿರಪರಾಧಿ ಜನರಿದ್ದಾರೆ ಅವರನ್ನು ಬಿಡುಗಡೆ ಮಾಡುತ್ತೇವೆಂಬ ಮಾತನ್ನು ನಾನು ಹೇಳಿದ್ದೇನೆ. ಗುಂಪಿನಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ, ಅರೆಸ್ಟ್ ಮಾಡಬೇಕಾದರೆ ಅದರಲ್ಲಿ ನಿರಪರಾಧಿಗಳು ಸೇರಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಅಂಥವರನ್ನು ವಿಚಾರಣೆ ಮಾಡಿ ಬಿಡುಗಡೆ ಮಾಡುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನಿರಪರಾಧಿಗಳ ಮೇಲೆ ಕೇಸ್ ಹಾಕಿ ಅವರನ್ನು ಕೋರ್ಟಿಗೆ ಅಲೆಸಬೇಕು ಎಂಬ ಉದ್ದೇಶ ಸರ್ಕಾರಕ್ಕಿಲ್ಲ. ಆ ಮಾತನ್ನು ನಾನು ಸ್ಪಷ್ಟಪಡಿಸಿದ್ದೇನೆ. ಇನ್ನು ಬೆಲೆ ಏರಿಕೆ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡೋಣವೆಂದು ನಾನು ಆಪತ್ತೇ ಹೇಳಿದ್ದೆ. ಆ ಬಗ್ಗೆ ಒಂದು ಸಮಿತಿಯನ್ನು ಮಾಡೋಣ. ಸಮಿತಿಯವರು ಸಲಹೆ ಕೊಡಲಿ. ಅವರು ಎಷ್ಟು ಬೇಗ ಸಲಹೆಗಳನ್ನು ಕೊಡುವರೋ ಅಷ್ಟು ಬೇಗ ಅವುಗಳನ್ನು ಈಡೇರಿಸುವುದಕ್ಕೆ ನಾನು ತಯಾರಾಗಿದ್ದೇನೆ.

ಇನ್ನು ಈ ಘಟನೆಗಳ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಮಾಡಿಸಲಾಗುವುದೆಂದು ನಾನು ಹೇಳಿದಾಗ, ನ್ಯಾಯಾಂಗ ವಿಚಾರಣೆಯನ್ನೇ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಎಸ್.ಆರ್. ಬೊಮ್ಮಾಯಿ, ಮಾನ್ಯ ಹೆಚ್. ಡಿ. ದೇವೇಗೌಡ ಮತ್ತಿತರ ಸ್ನೇಹಿತರು ಹೇಳಿದರು. ನಿಷ್ಪಕ್ಷಪಾತ ವಿಚಾರಣೆ ಮಾಡಿಸುವ ಬಗ್ಗೆ ಹಿಂದೇ ತಾರೀಖು ಪ್ರಕಟ ಮಾಡುವೆನೆಂದು ನಾನಂದು ಹೇಳಿದ್ದೆ. ಅಷ್ಟು ಹೊತ್ತಿಗೆ ಪೋಲಿಸರ ಕ್ರಮ ಸ್ವಲ್ಪ ಜಾಸ್ತಿಯಾಗಿದೆ ಎಂದು ಹೇಳಿದರು. ಮೆರವಣಿಗೆಯಲ್ಲಿ ಸಾವಿರ ಜನರಿರಲಿ ಮೂರು ಸಾವಿರ ಜನರಿರಲಿ ಎಲ್ಲರೂ ಶಾಂತಿಯುತವಾಗಿ ಹೋಗಿ ಸಭೆ ನಡೆಸಿದರೆ, ನನಗೆ ತಿಳಿದ ಹಾಗೆ, ಯಾವ ಪೋಲಿಸರೂ ಸಹ ಜನರನ್ನು ಉದ್ರೇಕಗೊಳಿಸಿ, ಜನರ ಮೇಲೆ ಲಾಠಿ ಚಾರ್ಜ್ ಅಥವಾ ಗುಂಡು ಹಾರಿಸುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರವೂ ಇದನ್ನು ಇಷ್ಟಪಡುವುದಿಲ್ಲ. ಸಭೆ ಅಥವಾ ಸಮಾರಂಭ ಅಥವಾ ಮೆರವಣಿಗೆ ಶಾಂತ ರೀತಿಯಿಂದ ನಡೆದರೆ ಸಾಕಪ್ಪಾ ಎಂದು ಪೋಲಿಸ್ ಅಧಿಕಾರಿಗಳು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತಾರೆ. ಗಲಾಟೆ ಸಂಭವಿಸಿದರೆ, ಅದರಿಂದ ಸಾರ್ವಜನಿಕರಿಗೆ ಮಾತ್ರ ಹಾನಿ ನಮಗೆ ಯಾವ ಹಾನಿಯೂ ಇಲ್ಲವೆಂದು ಯಾವ ಪೋಲಿಸರೂ ಭಾವಿಸುವುದಿಲ್ಲ. ಇದರ ಇನ್ನೊಂದು ಮುಖವೆಂದರೆ ಸಾಮಾನ್ಯವಾಗಿ ಇಂತಹ ಕಡೆಗಳಲ್ಲಿ ನಿರಪರಾಧಿಗಳು ಸಿಕ್ಕಿಹಾಕಿಕೊಳ್ಳುತ್ತಾರೆ. ಸಭೆ ಅಥವಾ ಮೆರವಣಿಗೆಯನ್ನು ಏರ್ಪಾಡು ಮಾಡಿರುವವರು ಎಲ್ಲೋ ಹೊರಟು ಹೋಗಿರುತ್ತಾರೆ, ವಿನಾಕಾರಣ ಲಾಠಿ ಚಾರ್ಜ್ ಅಥವಾ ಗುಂಡು ಹಾರಿಸುವ ಉದ್ದೇಶ ಯಾರಿಗೂ ಇರುವುದಿಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಅಥವಾ ಪರಿಸ್ಥಿತಿ ಕೈಮೀರಿ ಹೋದಾಗ ಪೋಲಿಸ್ ಅಧಿಕಾರಿಗಳು ಇನ್ನಾವ ಕ್ರಮ ಕೈಗೊಳ್ಳಬೇಕು ? ಮೊದಲು ಸ್ಥಳೀಯ ನಾಯಕರನ್ನು ಕರೆಸಿ, ಮಾತುಕತೆ ನಡೆಸುತ್ತಾರೆ. ಆಗ ನಾವೆಲ್ಲರೂ ಶಾಂತ ರೀತಿಯಲ್ಲಿ ಸಭೆ ಅಥವಾ ಸಮಾರಂಭ ನಡೆಸುತ್ತೇವೆಂದು ನಾಯಕರು ಆಶ್ವಾಸನೆ ಕೊಡುತ್ತಾರೆ. ಆಶ್ವಾಸನೆ ಕೊಟ್ಟಮೇಲೆ, ಮೆರವಣಿಗೆ ಹೋಗಿ ಸಭೆ ಸೇರಿದಾಗ ಆ ಜನರ ನಿಯಂತ್ರಣ ನಾಯಕರ ಅಥವಾ ಸಭೆಯನ್ನು ಏರ್ಪಾಡು ಮಾಡಿದವರ ಕೈಯಲ್ಲಿ ಇರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಬೇರೆಯವರೂ ಬಂದು ಅಲ್ಲಿ ಸೇರಿಕೊಳ್ಳುತ್ತಾರೆ. ಇಂತಹ ಸನ್ನಿವೇಶಗಳನ್ನೇ

† Indicates that remarks or speeches have not been revised by the member concerned.

ಅವರು ಹುಡುಕುತ್ತಿರುತ್ತಾರೆ. ಸಭೆಯಲ್ಲಿ ಗಲಾಟೆ ಎಬ್ಬಿಸಲು ಏನೂ ಮಾಡಬೇಕಿಲ್ಲ. ಯಾರೋ ಒಬ್ಬ ಎದ್ದುಬಿಟ್ಟು ಸುಮ್ಮನೆ ಹಾವು ಬಂತು ಎಂದು ಹೇಳಿಬಿಟ್ಟರೆ ಸಭೆಯಲ್ಲಿದ್ದವರೆಲ್ಲ ಎದ್ದುಬಿಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಗಲಾಟೆ ಪ್ರಾರಂಭವಾಗಲೂಬಹುದು.

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೇಳಿದ ಮೇಲೆ ಯಾರಾದರೂ ಪಾಠ ಕಲಿತುಕೊಂಡಾರು!

ಶ್ರೀ ಆರ್. ಗುಂಡೂರಾವ್.—ನೀವೂ ಕೂಡ ಮಾಡಿದ್ದೀರಿ ಇದನ್ನು ! ನೀವು ಏನೇನು ಮಾಡಿದ್ದೀರಿ ಎಂದು ನನಗೆಲ್ಲ ಗೊತ್ತು. ನೀವೇ ನನಗೆ ತರಬೇಕಿ ಕೊಟ್ಟಿದ್ದೀರಿ! ಅದನ್ನೇ ನಾವೀಗ ವಾಪಸ್ಸು ಮಾಡುತ್ತಿರುವುದು.

ಶ್ರೀ ಪೆಚ್.ಡಿ. ಚೌಡಯ್ಯ.—ಎಲ್ಲಾ ಜೊತೆಯಲ್ಲಲ್ಲವೇ ಮಾಡಿದ್ದು ?

ಶ್ರೀ ಆರ್. ಗುಂಡೂರಾವ್.—ನಾನು ವಯಸ್ಸಿನಲ್ಲಿ ಚಿಕ್ಕವನು. ಮಾನ್ಯ ವಿರೋಧಪಕ್ಷದ ಉಪ ನಾಯಕರು ರಾಜಕೀಯದಲ್ಲಿ ಪಳಗಿದವರು. ಅವರ ಗರಡಿಯಲ್ಲಿ ನಾವು ತಯಾರಾಗಿದ್ದೇವೆ. ನಮ್ಮ ಒಳ್ಳೆಯ ಮತ್ತು ಕೆಟ್ಟತನವೆಲ್ಲ ಅವರಿಗೆ ಸೇರಿದ್ದು. ನನ್ನದೇನಿಲ್ಲ. ಈಗೇತಕ್ಕೆ ನನ್ನ ಮೇಲೆ ಹೇಳುತ್ತಿದ್ದೀರಿ ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಇದನ್ನೆಲ್ಲ ತಾವು ಹಿಂದೆಯೇ ಬಹಿರಂಗಪಡಿಸಿದ್ದರೆ ಎಷ್ಟೋ ಜನರು ತಮಗೆ ಆಭಾರಿಯಾಗಿರುತ್ತಿದ್ದರು.

† ಶ್ರೀ ಆರ್. ಗುಂಡೂರಾವ್.—ಇದನ್ನೆಲ್ಲ ನೀವು ಏತಕ್ಕೆ ಯೋಚನೆ ಮಾಡುತ್ತೀರಿ ? ಯಾವ ಗರಡಿಯಲ್ಲೂ ನೀವಿರಲಿಲ್ಲ. ಆಕ್ಸಿಡೆಂಟಲ್ ಆಗಿ ಬಂದಿದ್ದೀರಿ. ನಿಮಗೂ ಇದಕ್ಕೂ ಸಂಬಂಧವಿಲ್ಲ. ನಾವು ಅವರ ಗರಡಿಯಲ್ಲಿ ತಯಾರಾಗಿದ್ದೇವೆ. ಆದರೆ, ನಮ್ಮ ಗರಡಿಯೇ ಬೇರೆ, ನಿಮ್ಮ ಗರಡಿಯೇ ಬೇರೆ. ಇದರ ಬಗ್ಗೆ ಈಗ ಹೆಚ್ಚು ಮಾತನಾಡುವುದು ಬೇಡ.

ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಯಾರಾದರೂ ನಿಂತು ಹಾವು ಬಂತೆಂದು ಹೇಳಿದರೆ, ತಕ್ಷಣವೇ ಸಭೆ ಚದುರುತ್ತದೆ. ಕೆಲವರು ಕಲ್ಲು ಹೊಡೆಯುತ್ತಾರೆ. ಇದೆಲ್ಲ ರಾಜಕೀಯದಲ್ಲಿ ನಡೆಯುತ್ತದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇಂತಹ ಸಂದರ್ಭಗಳನ್ನು ಪಯೋಗಿಸಿಕೊಂಡು ಸಮಾಜಘಾತಂಕ ಶಕ್ತಿಗಳು ಅಂಗಡಿಗಳನ್ನು ಲೂಟಿ ಮಾಡಲು ಪ್ರಯತ್ನ ಮಾಡುತ್ತವೆ. ಆಗ ಪೋಲಿಸರು ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕಾಗುತ್ತದೆ. ರೈತರಾಗಲಿ, ಕಾರ್ಮಿಕರಾಗಲೀ ಅಥವಾ ಯಾರೇ ಆಗಲಿ, ಯಾವ ರೀತಿ ತಮ್ಮ ಬೇಡಿಕೆಗಳನ್ನು ಸಲ್ಲಿಸಿ, ಅವುಗಳು ಈಡೇರದಿದ್ದರೆ ಕೊನೆಯ ಹಂತವಾಗಿ ಸತ್ಯಾಗ್ರಹ ಅಥವಾ ಚಳವಳಿ ಅಥವಾ ಇಂತಹ ಕ್ರಮಗಳಿಗೆ ಇಳಿಯುತ್ತಾರೆ ಅದೇ ರೀತಿ ಪೋಲಿಸರು ಸಹ ಪರಿಸ್ಥಿತಿ ಕೈಮೀರಿ ಹೋದ ಮೇಲೆ ಸಹನೆಯನ್ನು ಕಳೆದುಕೊಂಡು ಅನಿವಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಾರ್ವಜನಿಕರಿಗೆ ಮತ್ತು ವರ ಆಸ್ತಿಪಾಸ್ತಿಗಳಿಗೆ ರಕ್ಷಣೆ ಕೊಡುವುದು ಪೋಲಿಸರ ಜವಾಬ್ದಾರಿ. ಆದರಲ್ಲಿ ಅವರು ವಿಫಲರಾದರೆ ಅಥವಾ ಬೇಜವಾಬ್ದಾರಿಯಿಂದ ವರ್ತಿಸಿದರೆ ಆಗ ನಾವು ಅವರನ್ನು ಟೀಕೆ ಮಾಡುತ್ತೇವೆ. ಸಾರ್ವಜನಿಕರಿಗೆ ರಕ್ಷಣೆ ಕೊಡಬೇಕಾದರೆ ಪೋಲಿಸರು ಕೆಲವು ಕ್ರಮಗಳನ್ನು ಕೈಗೊಳ್ಳಲೇ ಬೇಕಾಗುತ್ತದೆ. ಇದು ಇಡೀ ವಿಶ್ವದಲ್ಲೇ ಇರುವಂಥ ವಿಚಾರ. ರಾಜ್ಯದಲ್ಲಿ ಇಷ್ಟೊಂದು ಭದ್ರತೆ ಇರುವುದಕ್ಕೆ ಮತ್ತು ನಾವಿಲ್ಲಿ ಶಾಂತಿಯುತವಾಗಿ ಶಾಸನ ಸಭೆ ನಡೆಸುವುದಕ್ಕೆ ಪೋಲಿಸ್ ಹೆದರಿಕೆಯೇ ಕಾರಣ. ಒಂದು ಪಕ್ಷ ೨೪ ಗಂಟೆಗಳ ಕಾಲ ಪೋಲಿಸರು ಕೆಲಸ ಮಾಡುವುದಿಲ್ಲ ಎಂದು ಹೇಳಿದರೆ...ಹೇಳುವುದಿಲ್ಲ... ಹೇಳಿದರೆ ಆಗ ಪರಿಸ್ಥಿತಿ ಏನಾಗುತ್ತದೆ ಏನ್ನುವುದನ್ನು ಯೋಚನೆ ಮಾಡಬೇಕು. ಪರಿಸ್ಥಿತಿ ಕೈ ಮೀರಿದಾಗ ಪೋಲಿಸರು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಹಾಗೆ ಕ್ರಮ ಕೈಗೊಳ್ಳುವಾಗ, ನಿಜ, ಬಸ್ ನಿಲ್ದಾಣದಲ್ಲಿ ಬಸ್ ಇಳಿದು ಹೋಗುತ್ತಿದ್ದವರೂ ದೊಂಬಿಯಲ್ಲಿ ಸೇರಿಕೊಂಡರೆ ಅವರಿಗೂ ಏಟು ಬೀಳುತ್ತದೆ. ದೊಂಬಿಯನ್ನು ನೋಡಲಿಕ್ಕೆ ಹೋದವರಿಗೂ ಏಟು ಬೀಳುತ್ತದೆ. ಆದರೆ ಉದ್ದೇಶ ಪೂರ್ವಕವಾಗಿ ಯಾರನ್ನೂ ಹಿಡಿದು ಹೊಡೆಯುವುದಿಲ್ಲ. ಇಂತಹ ಕೆಲಸವನ್ನು ಯಾವ ಸರ್ಕಾರವೂ ಮಾಡುವುದಿಲ್ಲ ಆದರಲ್ಲೂ ಪ್ರಜಾಪ್ರಭುತ್ವದಲ್ಲಿ ಪ್ರತಿ ವರ್ಷ ಒಂದಲ್ಲ ಒಂದು ಚುನಾವಣೆ ಸಂಬಂಧದಲ್ಲಿ ನಾವು ಜನಗಳ ಹತ್ತಿರ ಹೋಗಬೇಕಾಗುತ್ತದೆ. ಬರೀ ವಿಧಾನಸಭಾ ಚುನಾವಣೆಗೆ ಮಾತ್ರವಲ್ಲ, ತಾಲೂಕ್ ಬೋರ್ಡ್, ಮುನಿಸಿಪಾಲಿಟಿ, ಪಂಚಾಯತಿ ಮುಂತಾದವುಗಳಿಗೆ ನಡೆಯುವ ಚುನಾವಣೆಗೆಲ್ಲ ನಾವು ಜನರ ಹತ್ತಿರ ಹೋಗಬೇಕಾಗುತ ದೆ. ಆದುದರಿಂದ, ನಾವಿಲ್ಲಿ ಶಾಶ್ವತವಾಗಿರುತ್ತೇವೆ, ಜನರ

ಮೇಲೆ ಬಲವನ್ನು ಉಪಯೋಗಿಸಬಹುದು ಎಂಬ ಮನಸ್ಸು ಮಾಡುವುದಿಲ್ಲ. ಪರಿಸ್ಥಿತಿಗನುಸಾರವಾಗಿ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇದು ಇವತ್ತೇ ಆಲ್ಲ ಅನೇಕ ವರ್ಷಗಳಿಂದಲೂ ಹೀಗೆ ನಡೆದುಕೊಂಡು ಬಂದಿದೆ. ತೊಂದರೆಗೆ ಒಳಗಾಗಿರುವ ಮುಗ್ಧ ಜನರನ್ನು ವಿಚಾರಣೆ ಮಾಡಿ ಬಿಡುಗಡೆ ಮಾಡುವುದರಲ್ಲಿ ನನ್ನ ವಿರೋಧವಿಲ್ಲವೆಂದು ನಾನೆಂದೇ ಸ್ಪಷ್ಟಪಡಿಸಿದ್ದೇನೆ. ಇದರ ಬಗ್ಗೆ ೩೧ನೇ ತಾರೀಖು ಪ್ರಕಟಣೆ ಮಾಡುತ್ತೇನೆಂದು ನಾನು ಅವತ್ತೇ ಹೇಳಿದ್ದೆ. ಇಲ್ಲಿ ನಾವು ಎರಡು ವಿಧವಾಗಿ ಯೋಚನೆ ಮಾಡಬೇಕಾಗಿದೆ. ನಿನ್ನೆಯಿಂದ ರಾಜ್ಯದಲ್ಲಿ ಶಾಂತ ಪರಿಸ್ಥಿತಿ ಇದೆ. ನಾನು ೩೧ನೇ ತಾರೀಖು ಪ್ರಕಟಣೆ ಮಾಡಬೇಕೆಂದಿದ್ದುದನ್ನು ಮೂರು ದಿವಸಗಳ ಹಿಂದೆಯೇ ಪ್ರಕಟ ಮಾಡಿಬಿಟ್ಟಿದ್ದರೆ ಪರಿಸ್ಥಿತಿ ಶಾಂತವಾಗಿರುತ್ತದೆಂದು ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ, ನನ್ನ ಅಭಿಪ್ರಾಯದಲ್ಲಿ ಅಂದರೆ ಸರ್ಕಾರದ ಅಭಿಪ್ರಾಯದಲ್ಲಿ ಮೂರು ದಿವಸಗಳ ಹಿಂದೆಯೇ ನಾನು ಪ್ರಕಟಣೆ ಮಾಡಿದ್ದರೆ ಪರಿಸ್ಥಿತಿ ಇನ್ನೂ ಏಕೋಪಕ್ಕೆ ಹೋಗುತ್ತಿತ್ತೇನೋ ಎಂದು ಹೇಳುತ್ತೇನೆ.

ಶ್ರೀ ಎ ಜಿ. ಕೊಡಗಿ.--ಏತಕ್ಕೆ ?

ಶ್ರೀ ಆರ್. ಗುಂಡೂರಾವ್.--ಏತಕ್ಕೆ ಎಂದು ಹೇಳುತ್ತೇನೆ. ಇಂತಹ ಸನ್ನಿವೇಶಗಳಲ್ಲಿ ಪೋಲಿಸರ ಕ್ರಮವನ್ನು ಸ್ವಾಭಾವಿಕವಾಗಿ ಟೀಕೆ ಮಾಡುತ್ತಾರೆ. ಮೆರವಣಿಗೆಯಲ್ಲಿರುವ ಜನ ಹಿಂಸಾಚಾರಕ್ಕೆ ಇಳಿದಾಗ ಆದನ್ನು ಪೋಲಿಸರು ಲಘುವಾಗಿ ತೆಗೆದುಕೊಂಡಿದ್ದಿದ್ದರೆ ಮುಗ್ಧ ನಾಗರೀಕರಿಗೆ ಬಹಳ ತೊಂದರೆಯಾಗುತ್ತಿತ್ತು. ಪೋಲಿಸರು ಸಕಾಲದಲ್ಲಿ ಸರಿಯಾದ ಕ್ರಮವನ್ನು ಎಲ್ಲ ಕಡೆ ತೆಗೆದುಕೊಂಡಿದ್ದರ ದೆಸೆಯಿಂದಾಗಿ ನಿನ್ನೆ ದಿವಸಕ್ಕೆ ಶಾಂತಿ ಮೂಡಿದೆ. ಇನ್ನು ಮುಂದೆಯೂ ಶಾಂತಿ ಮುಂದುವರಿಯಬಹುದು. ಇಂತಹ ಸಮಸ್ಯೆಗಳು ಬಂದಾಗ ನಾವು ಪರಸ್ಪರ ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ನಾನು ಅವತ್ತೇ ತಿಳಿಸಿದಂತೆ, ನನಗೆ ಅಂದು ಬಂದ ಮಾಹಿತಿ ಪ್ರಕಾರ ಆ ಚಳವಳಿಯಲ್ಲಿ ಮತ್ತು ಹಿಂಸಾಚಾರದಲ್ಲಿ ಯಾವುದೇ ರಾಜಕೀಯ ಪಕ್ಷಗಳ ನೇರವಾದ ಪಾತ್ರವಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ.

೧೨-೨೦ ಪಿ.ಎಂ.

ಆದರೆ, ಇವತ್ತಿನ ದಿವಸ ಆ ಪರಿಸ್ಥಿತಿ ಇಲ್ಲ. ಇವತ್ತಿನ ದಿವಸ ಕೆಲವು ಭಾಗಗಳಲ್ಲಿ ಕೆಲವು ಪಕ್ಷದವರು ಕರಪತ್ರಗಳನ್ನು ಅಚ್ಚುಹಾಕಿಸಿ, ರೈತರ ಚಳುವಳಿಗೆ, ಬೆಲೆ ಏರಿಕೆ ಚಳುವಳಿಗೆ ಬೆಂಬಲ ಕೊಡುತ್ತೇವೆ, ಸೇರುತ್ತೇವೆಂದು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ರಾಜ್ಯಮಟ್ಟದಲ್ಲಿ ಅಥವಾ ಜಿಲ್ಲಮಟ್ಟದಲ್ಲಿ ಒಪ್ಪಿಗೆ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ಪರಿಸ್ಥಿತಿ ಹದಗೆಡುತ್ತದೆ. ನಮ್ಮ ಮತ್ತು ನಿಮ್ಮ ಒಪ್ಪಂದ ಎರಡೂ ಒಂದೇ; ನಾವು ಈಗಾಗಲೇ ಒಪ್ಪಂದಕ್ಕೆ ಬಂದಿದ್ದೇವೆ. ನಮ್ಮ ಗುರಿ ಮತ್ತು ನಿಮ್ಮ ಗುರಿ ಎರಡೂ ಒಂದೇ. ರಾಜ್ಯದಲ್ಲಿ ಶಾಂತಿ ಸ್ಥಾಪನೆಯಾಗಬೇಕು; ಬೆಲೆಗಳು ಕಡಿಮೆಯಾಗಬೇಕು. ಬೆಲೆಗಳನ್ನು ಕಡಿಮೆ ಮಾಡುವ ಬಗ್ಗೆ ಇನ್ನು ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು; ಸಲಹಾ ಸಮಿತಿಗಳನ್ನು ಮಾಡಬೇಕು; ಇದನ್ನೆಲ್ಲಾ ಮಾಡೋಣ. ಹೀಗೆಲ್ಲಾ ಇರಬೇಕಾದರೆ ಪುನಃ ರಾಜ್ಯದಲ್ಲಿ ಚಳುವಳಿಗೆ ಕೊಡುವುದು ಸರಿಯೇ ? ಶಾಂತಿಯುತವಾದ ಚಳುವಳಿಗೆ ಯಾವತ್ತು ನನ್ನ ವಿರೋಧ ಇಲ್ಲ.; ನನ್ನ ಆಭ್ಯಂತರ ಇಲ್ಲ. I have no objection. Not only the opposition parties, even the ruling party members can take this agitation. Nothing is wrong if the ruling party wing participates in the agitation. I do not say, Government. The Ruling Party can also organise meetings at various levels such as Taluk Level, District Level and State Level. They can also take this issue and convince the people. They can also draw the attention of the Government. Once the Government is formed, it is a non-party Government as far as the functioning is concerned though it is a party-based Government. We have to treat all the legislators equally. That is how we have to work. ಆ ದಾರಿಯಲ್ಲಿ ಸರ್ಕಾರ ನಡೆಸುವಾಗ ಯಾವ ಪಕ್ಷ ಬೇಕಾದರೂ ಚಳುವಳಿ ಮಾಡಬಹುದು. ಯಾವ ಪಕ್ಷವೇ ಆಗಲೀ; ಶಾಂತಿಯುತವಾಗಿ ಚಳುವಳಿ ಮಾಡುವುದಕ್ಕೆ ಇದೆ. ಅವಕಾಶ ಚಳುವಳಿಯಾವಾಗ ಹಿಂಸೆಯ ವಾತಾವರಣಕ್ಕೆ ಬರುತ್ತೆ. ಆದರೆ ಆಗ

ಯಾರು ಚಳುವಳಿಯನ್ನು ಸಂಘಟನೆ ಮಾಡುತ್ತಾರೆ; ಅವರಿಗೂ ಕೂಡ ಅದನ್ನು ಹತೋಟಿಗೆ ತರುವುದು ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ಪೋಲೀಸರ ಸಹಾಯ ಬೇಕೇ ಬೇಕಾಗುತ್ತದೆ. ವಿದ್ಯಾರ್ಥಿ ಚಳುವಳಿ ನಡೆಸಿರುವವರು ? ಕಾರ್ಮಿಕರ ಚಳುವಳಿ ನಡೆಸಿರುವವರು, ರೈತರ ಚಳುವಳಿ ನಡೆಸಿರುವವರು ನಮಗೂ ಸಾಕಷ್ಟು ಗೊತ್ತಿದೆ ಚಳುವಳಿ ಕೈಮೀರಿ ಹೋದಾಗ ಕಷ್ಟವಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಯದಿಂದ ಕೇಳಿಕೊಳ್ಳುವುದು ಏನೆಂದರೆ, ನಿಜ ಪರಿಸ್ಥಿತಿಯ ಬಗ್ಗೆ ಜನತೆಗೆ ತಿಳಿವಳಿಕೆ ಕೊಟ್ಟು ಶಾಂತಿಯುತವಾಗಿ ಹೋಗುವುದಕ್ಕೆ ಅವಕಾಶ ಮಾಡಿಕೊಡಿ. ಬಸ್ಸಿಗೆ ಕಲ್ಲು ಹೊಡೆಯುವುದು, ಸಿನಿಮಾ ಥೀಯೇಟರುಗಳಿಗೆ ಕಲ್ಲು ಹೊಡೆಯುವುದು; ಪೆಟ್ರೋಲ್ ಬಂಕ್‌ಗಳಿಗೆ ಬೆಂಕಿ ಹಚ್ಚುವುದು; ಇದೆಲ್ಲಾ ಯಾರಿಗೆ ನಷ್ಟ ? ರಾಜ್ಯಕ್ಕೆ ನಷ್ಟ ; ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇ? ಇವತ್ತು ಮಂಡ್ಯ ಬಂದ್; ಮದ್ದೂರು ಬಂದ್; ಕನಕಪುರ ಬಂದ್ ಆಯಿತು ಎಂದು ಇಟ್ಟುಕೊಳ್ಳಿ; ಮಿಲ್ಕ್ ವ್ಯಾನ್ ಬರಲಿಲ್ಲ; ಆಸ್ಪತ್ರೆಗಳಿಗೆ ಹಾಲು ಇಲ್ಲ; ರೋಗಿಗಳಿಗೆ ಹಾಲು ಕೊಡದೇ ಇದ್ದರೆ ಆಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ರೋಗಿ ಸತ್ತುಹೋದರೆ ಆ ಪಾಪ ಕೂಡ ನಮ್ಮ ಮೇಲೆ ಇರುತ್ತೆ. ನೇರವಾಗಿ ಇಲ್ಲದಿಹೋದರೂ ಪರೋಕ್ಷವಾಗಿ ಇದ್ದೇ ಇರುತ್ತೆ. ಆಗತ್ಯ ಸೇವೆಗಳ ಮಸೂದೆ ಮೇಲೆ ನಾನು ಕೆಲವೊಂದು ಮಾತುಗಳನ್ನು ಹೇಳಿದ್ದೇನೆ. ಅದನ್ನೆಲ್ಲಾ ಹೇಳುವುದಕ್ಕೆ ಈಗ ಸಮಯ ಇಲ್ಲ. ಆದ್ದರಿಂದ ಯಾವ ಪಕ್ಷದವರೇ ಆಗಲೀ ಪ್ರಚೋದನೆ ಮಾಡುವುದಕ್ಕೆ ಹೋಗಬಾರದು. ನಿನ್ನೆ ತಾರೀಖಿನ ಮೈಸೂರು ಬಂದ್‌ಗೆ ಎಲ್ಲಾ ರಾಜಕೀಯ ಪಕ್ಷಗಳು ಕರೆಕೊಟ್ಟಿವೆ. ಬಂದ್ ಅಂದರೆ ಯಾರು ಆಂಗಡಿ ಬಾಗಿಲುಗಳನ್ನು ತೆರೆಯಬಾರದು; ಹೊಟೆಲುಗಳನ್ನು ತೆಗೆಯಬಾರದು; ಶಾಲಾ ಕಾಲೇಜುಗಳನ್ನು ಮುಚ್ಚಬೇಕು; ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಬೇಕು; ಚಳುವಳಿಗಾರರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸುವಾಗ ಸ್ವಲ್ಪ ಹೆಚ್ಚು ಕಡಿಮೆಯಾದರೆ ಯಾರು ಕಂಟ್ರೋಲ್‌ಕೂಡ ಇರುವುದಿಲ್ಲ. ಕಂಟ್ರೋಲ್ ತಪ್ಪಿದಾಗ ಪೋಲೀಸಿನವರು ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. ಸಾವಿರಾರು ಜನ ಹೋಟೆಲುಗಳಲ್ಲಿ ಊಟ ಮಾಡುವವರು ಇರುತ್ತಾರೆ; ಇಂಥ ಸಂದರ್ಭದಲ್ಲಿ ಆವರುಗಳಿಗೆ ಊಟ ಸಿಗುವುದಿಲ್ಲ. ಈರೀತಿಯಾದ ಚಳುವಳಿಯ ನೆಪದಲ್ಲಿ ಸಮಾಜಘಾತಕ ಶಕ್ತಿಗಳು ಎಂದು ಏನು ಹೇಳುತ್ತೇವೆ; ಇವರು ಒಂದು ಕಡೆ ಕಲ್ಲು ಹೊಡೆಯುವುದು ; ಆಂಗಡಿಗಳನ್ನು ಲೂಟಿ ಮಾಡುವುದು ಮತ್ತಿತರ ಕೆಲಸಗಳನ್ನು ಮಾಡುತ್ತಾರೆ. ಯಾರೂ ಕಛೇರಿಗಳಿಗೆ ಹೋಗುವಂತಿಲ್ಲ; ಕೋರ್ಟುಗಳಿಗೆ ಹೋಗುವಂತಿಲ್ಲ. ಈ ರೀತಿ ಆದರೆ ಎಲ್ಲಾ ನಾಗರೀಕರು ಶಹಭಾಷ್‌ಗಿರಿ ಕೊಡುತ್ತಾರೆಂದು ತಿಳಿದುಕೊಂಡಿದ್ದೀರೇನೂ ? ಯಾರೂ ಶಹಭಾಷ್‌ಗಿರಿ ಕೊಡುವುದಿಲ್ಲ. ಬೆಂಗಳೂರು ನಗರ ಬಂದ್ ಆದರೆ ಯಾರಿಗೆ ತೃಪ್ತಿ ? ಬಸ್ಸುಗಳು ಇರುವುದಿಲ್ಲ ಆಟೋಕ್ಷಾಗಳು ಇರುವುದಿಲ್ಲ; ಬಂದ್‌ಗೆ ಜಯವಾಯಿತೆಂದರೆ, ಯಾರನ್ನು ತೃಪ್ತಿ ಪಡಿಸುವುದಕ್ಕೆ ಜಯ ನಗರಗಳು ಬಂದ್ ಆದರೆ, ನಿಂದಿಸುವವರು ಇದ್ದಾರೆ; ಪತ್ರಿಕೆಗಳಲ್ಲಿ ಬಂದ್ ಯಶಸ್ವಿಯಾಯಿತುಅಂತ ಬಂದರೆ ಸಾಕೇ ? ಬಂದ್‌ನ್ನು ನಾವು ಮಾಡಿದರೂ ಒಂದೇ; ನೀವು ಮಾಡಿದರೂ ಒಂದೇ, ಪರಿಸ್ಥಿತಿ ಎಲ್ಲರಿಗೂ ಕಷ್ಟವಾಗುತ್ತದೆ. ನಾವು ನೀವು ಮಾಡುವಾಗ ಅದು ಗೊತ್ತಿರಲಿಲ್ಲ.

ಶ್ರೀ ಪಂಪಾಪತಿ.—ಆ ಸ್ಥಾನಕ್ಕೆ ಬಂದಾಗ ಹಾಗೆ ಹೇಳಬೇಕು ಅನ್ನಿಸುತ್ತೆ;

ಶ್ರೀ ಆರ್. ಗುಂಡೂರಾವ್.—ತಾವು ಕೂಡ ಮುನಿಸಿಪಾಲಿಟಿ ಪ್ರೆಸಿಡೆಂಟ್ ಆಗಿದ್ದಿರಿ, ತಮಗೂ ಕೂಡ ಗೊತ್ತಿದೆ. ತಾವು ಕೌನ್ಸಿಲರ್ ಆಗಿದ್ದಾಗ ಆ ಕಷ್ಟ ಗೊತ್ತಿರಲಿಲ್ಲ. ನಾನು ಯೂತ್ ಮಿನಿಸ್ಟರ್ ಆಗಿದ್ದಾಗ, ಬಂದು ಸಂದರ್ಭದಲ್ಲಿ ಹೋಗಿದ್ದಾಗ ಅನೇಕ ಕಷ್ಟಗಳನ್ನು ಅವರು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೀಲ್.—ತಾವು ಸಾಕಷ್ಟು ಬಂದ್‌ಗಳನ್ನು ಮಾಡಿಸಿ ಅಧಿಕಾರಕ್ಕೆ ಬಂದಿರಿ. ನಾವು ಹೇಗೆ ಬರಬೇಕು ?

ಶ್ರೀ ಆರ್. ಗುಂಡೂರಾವ್.—ನನ್ನ ವಿರೋಧ ಇಲ್ಲ. ನಾವುಗಳು ಬಂದ್ ಮಾಡಿಸಿ ಅಧಿಕಾರಕ್ಕೆ ಬರವುದಕ್ಕಾಗಲಿಲ್ಲ. ನಮ್ಮ ಕಷ್ಟ ನಿಮಗೆ ಏನು ಗೊತ್ತು. ನನಗೆ ಸೀಟು ಕೂಡ ಸಿಗುತ್ತಾ ಇರಲಿಲ್ಲ. ಬೇರೆ ಮಾರ್ಗದಲ್ಲಿ ಹೋಗೋಣ ಅಂತ ಹೊರಟೆವು ಅಲ್ವೇನ್ರಿ. ಯಾವರೀತಿ ಬಂದೆವೋ ಗೊತ್ತಾಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ಗುಂಡೂರಾಯರು ಈ ರೀತಿ ಕೆಲಸ ಮಾಡುತ್ತಾರೆ ; ಅವರಿಗೆ ಸೀಟು ಕೊಡಬಾರದು ಎಂದು ಹೋರಾಟ ನಡೆಯಿತು.

ಶ್ರೀ ಆರ್. ಗುಂಡೂರಾವ್.—ಹೌದು ; ಇದ್ದ ವಿಚಾರವನ್ನು ಇದ್ದಹಾಗೆ ನೇರವಾಗಿ ಹೇಳುತ್ತಿದ್ದೆ. ಎಕ್ಸಿಕ್ಯೂಟೀವ್ ಕಮಿಟಿಯಲ್ಲಿದ್ದಂತ ಹಿರಿಯರೆಲ್ಲರೂ ಸೇರಿಕೊಂಡು ಟಿಕೆಟ್ ಕೊಡಬಾರದು ಅಂತ ಮಾಡಿದ್ದರು. ನಾನು ಯಾರೋ ಒಬ್ಬರಿಗೆ ಟಿಕೆಟ್ ಕೊಡಬೇಕೆಂದು ಹೇಳಿದ್ದೆ. ಅವರು ಸೋತುಹೋಗಿ ಬಿಡುತ್ತಾರೆ ಬೇಡ ಅಂತ ಹೇಳಿದರು. ನೀವೆಲ್ಲಾ ಗೆಲ್ಲುತ್ತೀರೆಂಬುದಕ್ಕೆ ಏನು ಗ್ಯಾರಂಟಿ ? ಎಂದು ಪ್ರಶ್ನೆ ಮಾಡಿದ್ದೆ. ಕಾಫಿ ಕೂಡ ಕೆ. ಆರ್. ನಗರದಲ್ಲಿ ಸೋತು ಹೋದಿರಿ; ಮಂಡ್ಯದಲ್ಲಿ ನಿಂತು ಸೋತು ಹೋದಿರಿ; ಮದ್ದೂರುನಲ್ಲಿ ನಿಂತು ಸೋತು ಹೋದಿರಿ; ನೀವು unpopular ಅಂತ ಹೇಳಬೇಕೇ ?

ಸ್ವಾಮಿ, ಈತನೇ ಮುಂದೆ ಈ ರಾಜ್ಯದ ಮುಖ್ಯ ಮಂತ್ರಿ ಆಗುತ್ತಾನೆ, ಈಗಲೇ ಕಳುಹಿಸಿ ಬಿಡೋಣ ಅಂತ ಪ್ಲಾನ್ ಮಾಡಿದ್ದರು, ಅದು ಆಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಏನು ಮಾಡಿದೆ ಅಂತ ಹೇಳಿ.

ಶ್ರೀ ಆರ್. ಎಸ್. ಪಾಟೀಲ್.—ಸ್ವಾಮಿ, ನಿಮ್ಮ, ಅವರ ವಿಚಾರ ಇಲ್ಲಿ ಬೇಡ.

ಶ್ರೀ ಆರ್. ಗುಂಡೂರಾವ್.—ಅವರು ಹೇಳಿದ ಮೇಲೆ ಅವರಿಗೆ ಶಹಭ್ಬಾಸ್‌ಗಿರಿ ಕೊಡದೇ ಇದ್ದರೆ ತಪ್ಪಾಗುತ್ತದೆ Of course, he said "We talk of youngsters. We should support youngsters" ನಮಗೆಲ್ಲಾ ಸಪೋರ್ಟ್ ಮಾಡಿದರು. I agree. He was a Membes of the Election Committee, He supported. I was also a member of the Election Committee in the capacity of the invitee as the Youth congress President. ಗುಪ್ತವಾಗಿ ವೋಟಿಂಗ್ ಮಾಡುವುದನ್ನು ಅವರು ಬಿಟ್ಟು ಬಿಟ್ಟರು. ಈಗ ಅದೆಲ್ಲಾ ಬೇಡ ಇನ್ನೊಂದು ಸಾರಿ ಚರ್ಚೆ ಮಾಡೋಣ. ಚರ್ಚೆ ಮಾಡುವ ಅವಕಾಶ ಬರುತ್ತದೆಯೋ ಅಥವಾ ಎಲ್ಲಾ ಒಟ್ಟಾಗುತ್ತೇವೆಯೋ ಅದು ಈಗಲೇ ಗೊತ್ತಿಲ್ಲ.

SRI N. A. SIDDIQUE.—It is after all between U and I.

ಶ್ರೀ ಅಜೀಜ್‌ಸೇಟ್.—ಈಗ ಅವರು ಹೇಳುವುದನ್ನು ನೋಡಿದರೆ, ಏನೋ ಪಿತೂರಿ ನಡೆಸುತ್ತಿದ್ದಾರೆ ಅಂತ ಕಾಣುತ್ತದೆ.

ಶ್ರೀ ಆರ್. ಗುಂಡೂರಾವ್.—ರಾಜಕೀಯವೇ ಒಂದು ಪಿತೂರಿ ಅಲ್ಲವೇ ?

SRI AZEEZ SAIT.—Does the Chief Minister agree that politics is played by a set of rogues ?

SRI R. GUNDU RAO.—I do not agree. That is your thinking. I cannot subscribe for that.

SRI A. LAKSHMISAGAR.—Mr. Speaker, I certainly feel that you agree with me completely that this august Assembly is not a mutual admiration society.

SRI R. GUNDU RAO.—Every-one knows that. Unfortunately, people who have not married and remained as bachelors cannot share that joy. What can I do for that ? I am sorry for that.

SRI A. LAKSHMISAGAR.—I certainly wish that the joy and happiness shall be the monopoly of all married people.

ಶ್ರೀ ಜೆ.ಹೆಚ್. ಪಟೇಲ್.—ಸ್ವಾಮಿ, ನಾವು ಮದುವೆ ಡಿಸ್ಕ್ಯಾಂಡ್ ಇಟ್ಟಿಲ್ಲ.

ಶ್ರೀ ಆರ್. ಗುಂಡೂರಾವ್.—ಮದುವೆ ಕೆಲಸ ಗೊಂದಲ ಇಲ್ಲದೆ ಆಗಬೇಕಾದರೆ ಮಾನ್ಯ ಪಟೇಲ್ ಅವರು ಮುಂದೆ ನಿಲ್ಲಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಎಲ್ಲ ಪಕ್ಷದವರು ಸಕ್ರಿಯವಾಗಿ ಕರೆ ಕೊಡಬೇಕಾಗುತ್ತದೆ. ಇಪ್ಪತ್ತು ದೇಶದಲ್ಲಿ ಇದೇ ರೀತಿ ಮುಂದುವರಿದುಕೊಂಡು ಹೋದರೆ ಯಾರಿಗೆ ನಷ್ಟ ? ದೇಶಕ್ಕೆ ನಷ್ಟ, ರಾಜ್ಯಕ್ಕೆ ನಷ್ಟ. ಈ ಸಂದರ್ಭದಲ್ಲಿ ಶಾಂತ ವಾತಾವರಣದಲ್ಲಿ ನ್ಯಾಯ

ವಾದ ಬೇಡಿಕೆಯನ್ನು ಸರ್ಕಾರ ಈಡೇರಿಸಲಿಕ್ಕೆ ಏನು ಸಲಹೆ ಕೊಡಬೇಕೋ ಅದನ್ನು ಮಾನ್ಯ ಸದಸ್ಯರು ಕೊಡಲಿ ಜನರ ಹಿತದೃಷ್ಟಿಯಿಂದ ಕೆಲಸ ಮಾಡಲಿಕ್ಕೆ ಸರ್ಕಾರ ಖಂಡಿತ ಸಿದ್ಧ ಇದೆ. Again I appeal to you that it is only we that can solve our problems by mutual understanding, mutual discussion and mutual admiration. Otherwise it is very difficult. ಮುಂದಕ್ಕಾದರೂ ಆಷ್ಟೆ, ಇವೊತ್ತು ತೃಪ್ತಿಪಟ್ಟುಕೊಂಡು, ಇನ್ನೊಂದು ಗಲಾಟೆ ಆದರೆ Government cannot sit quiet. ಪ್ರಚೋದನೆ ಮಾಡಬಾರದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಅನಾವಶ್ಯಕವಾಗಿ ಕೆಲಸ ಮಾಡಬಾರದು ಎಂಬುದನ್ನು ಸಹ ನಾನು ಒಪ್ಪಿಕೊಳ್ಳುತ್ತೇನೆ. ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಸಾರ್ವಜನಿಕರ ಆಸ್ತಿ ಲೂಟಿಯಾಗುತ್ತಿದೆ ಅಂದರೆ ಯಾವ ಸರ್ಕಾರವೂ ಕೂಡ ಸುಮ್ಮನೆ ಕುಳಿತುಕೊಂಡಿರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಾವು ತಮ್ಮ ತಮ್ಮ ಕ್ಷೇತ್ರದಲ್ಲಿ ಶಾಂತಿಪಾಲನೆಗೆ ಕೆಲಸ ಮಾಡಬೇಕಾಗುತ್ತದೆ, ಅದೇ ರೀತಿ ನಾವು, ಕೂಡ ನಮ್ಮ ನಮ್ಮ ಕ್ಷೇತ್ರದಲ್ಲಿ ಶಾಂತಿಪಾಲನೆಗೆ ಕೆಲಸ ಮಾಡಬೇಕಾಗುತ್ತದೆ. ಇವೊತ್ತು ನಾವು, ನೀವು ಸೇರಿಕೊಂಡು ಇದನ್ನು ಪರಿಹರಿಸಲಿಕ್ಕೆ ಪ್ರಯತ್ನ ಮಾಡಬೇಕೇ ಹೊರತು ಜಾಸ್ತಿಯಾಗಿ, ಪ್ರಚೋದನೆಗೆ ಮುಂದು ವರಿದರೆ ಯಾರಿಗೂ ಒಳ್ಳೆಯದಾಗುವುದಿಲ್ಲ. ಇವೊತ್ತು ವಕೀಲರು ವಾದ ಮಾಡಿದರೆ ಹಿಡಿದುಕೊಂಡು ಹೊಡೆಯಂವುದು, ಡಾಕ್ಟರು ಟ್ರೀಟ್‌ಮೆಂಟ್ ಕೊಟ್ಟರೆ ಹಿಡಿದುಕೊಂಡು ಹೊಡೆಯುವುದು, ಕಾರಿನಲ್ಲಿ ಹೋಗುತ್ತಿದ್ದಂತಹ ಲಾಯರನ್ನು ನೀನು ಏತಕ್ಕೆ ಅವರ ಪರ ವಾದ ಮಾಡಿದೆ ಅಂತ ಹಿಡಿದುಕೊಂಡು ಹೊಡೆದರೆ ಹೇಗೆ ? Where are we going to land ? Doctor should not treat, an Engineer should not work, a teacher should not teach, a lawyer should not argue ಅಂದರೆ ಹೇಗೆ ? ಇಂತಹ ಸಂದರ್ಭದಲ್ಲಿ ನಮ್ಮ ನಿಮ್ಮ ಜವಾಬ್ದಾರಿ ಕಲೆಕ್ಟಿವ್ ರೆಸ್‌ಪಾನ್‌ಸಿಬಿಲಿಟಿ ಇದೆ. ನಾವು, ನೀವು ಈ ಕೆಲಸವನ್ನು ಒಟ್ಟಿಗೆ ಮಾಡೋಣ. ಈಗ ತಾವು ಎರಡು ಸದನದ ಸದಸ್ಯರ ಒಂದು ಸಮಿತಿಯನ್ನು ಎಲ್ಲ ಕಡೆ ಕಳುಹಿಸೋಣ ಅಂತ ಹೇಳಿದ್ದೀರಿ, I will agree Yes, we will send the Legislature Committee everywhere. We will send them, ಅವರು ಹೋಗಿ ನೋಡಿಕೊಂಡು ಬರಲಿ ಪರಿಹಾರ ಹೇಳಲಿ, ಅದೇ ತಾನೇ ತಮ್ಮ ಮನವಿ ಮಾನ್ಯ ಬಸವಲಿಂಗಪ್ಪನವರಿಗೆ, ೨೫ ವರ್ಷದಿಂದ ವಿರೋಧ ಪಕ್ಷದಲ್ಲಿ ಕೆಲಸಮಾಡಿ ಅನುಭವ ಇಲ್ಲ. ಮಂತ್ರಿಗಳಾಗಿ ಕೆಲಸ ನಡೆಸಿದವರು. ಈಗ ಸಿಕ್ಕಿಕೊಂಡಿದ್ದಾರೆ ಅವರ ಪರಿಸ್ಥಿತಿ ಬೇಡ.

ಶ್ರೀ ಮಳ್ಳೂರು ಆನಂದರಾವ್.—ಈ ಆವ್ಯವಸ್ಥೆಯಿಂದ ಅವರಿಗೆ ಯಾವಾಗ ಮುಕ್ತಿ ಕೊಡಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್ —ಅವರಿಗೆ ಮುಕ್ತಿ ಕೊಡಿಸಲಿಕ್ಕೆ ಮಾನ್ಯ ಮಂಳ್ಳೂರು ಆನಂದರಾವ್ ಅವರೇ ಪ್ರಯತ್ನ ಮಾಡಬೇಕು. ಮಾನ್ಯ ಬಸವಲಿಂಗಪ್ಪನವರಿಗೂ ಮಾನ್ಯ ಹಾರ್‌ನಳ್ಳಿ ರಾಮಸ್ವಾಮಿ ಯವರಿಗೂ ಇದು ಏತಕ್ಕೆ ಬೇಕಾಗಿತೋ ಗೊತ್ತಿಲ್ಲ. ಇನ್ನು ಅಜೀಜ್ ಸೇಠ್ ಅವರು By accident he joined the ruling party. Otherwise he is fit to be in the Opposition party.

SRI AZEEZ SAIT.—Thank you very much for the compliments.

ಶ್ರೀ ಆರ್. ಗುಂಡೂರಾವ್. —ಇವೊತ್ತು ತಮ್ಮ ಬೇಡಿಕೆ ಏನು ಇದೆ, ನಮ್ಮ ಬೇಡಿಕೆ ಅವರ ಬೇಡಿಕೆ ಎರಡೂ ಒಂದೇ ಇದಕ್ಕಾಗಿ ನಿನ್ನೆ ಧರಣಿ ಮಾಡುವ ಪರಿಸ್ಥಿತಿಗೆ ಅವರು ಬರಬೇಕಾಗಿರಲಿಲ್ಲ. ತೀವ್ರವಾಗಿ ಸರ್ಕಾರದ ಗಮನವನ್ನು ಸೆಳೆಯಬೇಕು ಅಂತ ಹೇಳಿದರು ನಾನು ನಿನ್ನೆಯ ದಿವಸ ಇದರ ಬಗ್ಗೆ ಚರ್ಚೆ ಮಾಡೋಣ ಬನ್ನಿ ಸ್ವಾಮಿ, ಅಂತ ಕರೆದಿದ್ದೇನೆ. ನೆನ್ನೆಯ ದಿವಸ ಅವರ ಮನಸ್ಸಿಗೆ ಆದು ಒಪ್ಪಲಿಲ್ಲ. ನಾವು ಈ ಚರ್ಚೆಗೆ ಏತಕ್ಕೆ ಒಪ್ಪಬೇಕು ಅಂತ ಹೇಳಿ ವಿಶೇಷವಾದ ನಿಲುವನ್ನು ತೆಗೆದುಕೊಂಡರು. ನಾನು ಬೆಳಿಗ್ಗೆಯಿಂದ ಸಂಜೆ ನಾಲ್ಕೂವರೆ ಗಂಟೆಯವರೆಗೂ, ಎಷ್ಟು ಹೊತ್ತಿಗಾದರೂ ಬರಲಿ ಚರ್ಚೆ ಮಾಡೋಣ ಅಂತ ಕಾದು ಕುಳಿತಿದ್ದೆ. ಸಾಯಂಕಾಲ ಆಯಿತು ಆನಂತರ ಇವೊತ್ತು ವೋಟಿಂಗ್ ಮಾಡುವುದು ಬೇಡ ಬೆಳಿಗ್ಗೆ ಸೇರೋಣ ಅಂತ ಆಯಿತು. ಇದು ಆದಮೇಲೆ ಬೆಳಿಗ್ಗೆ ಪತ್ರಿಕೆಯಲ್ಲಿ ಶ್ರೀ ಗುಂಡೂರಾವ್ ಸರ್ಕಾರದ ವಚ್ಚಾಕ್ಕೆ ವಿರೋಧ ಪಕ್ಷದವರ ಧರಣಿ ಅಂತ ಬಂದಿದೆ. ವಿರೋಧ ಪಕ್ಷದವರು ಧರಣಿ ಮಾಡಿದ್ದಕ್ಕೆ ಯಾವ ಸರ್ಕಾರ ರಾಜೀನಾಮೆ ಕೊಟ್ಟಿದೆ ಸ್ವಾಮಿ ; ಇನ್ನೊಂದು ವಿಚಾರ ಹೇಳಬೇಕು

ಅಂದರೆ ಜಿಲ್ಲಾ ಚೀಫ್ ಮಿನಿಸ್ಟರು ಕಾರು ತೆಗೆದುಕೊಂಡರು, ನನಗೂ ಒಂದು ಕಾರು ಬಂದಿದೆ. ಅಷ್ಟಕ್ಕೇ ಕಾರು ಬಂತು, ಕಾರು ಬಂತು, ಅಂತ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರೆದುಬಿಡುವುದು. ಈಗ ಯಾರು ಏನೇ ಮಾಡಿದರೂ ಅದು ಒಂದು ತರಹ ಪಬ್ಲಿಸಿಟಿ ಬಿಡಿ. ಇದರಿಂದ ಏನಾಗಿದೆ ಅಂದರೆ ನಾನು ಎಲ್ಲಿಗೆ ಹೋದರು ಕಾರು ನೋಡಲಿಕ್ಕೆ ನೂರಾರು ಜನ ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ನೂರಾರು ಜನ ನೋಡಲಿಕ್ಕೆ ಆದರೂ ಅವಕಾಶ ಆಯಿತು ಬಿಡಿ ಹಿಂದೆ ಶ್ರೀಮಾನ್ ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾದಾಗ ಅವರಿಗೆ ಒಂದು ಬೆಂಜ್ ಕಾರು ಬಂತು. ಅದು ಏನೇ ಮಾಡ್ಲ್. ನನಗೆ ಏನೇ ಮಾಡ್ಲ್ ಕಾರು ಬಂತು. ಈ ಕಾರು ಬಂದ ತಕ್ಷಣವೇ ಪತ್ರಿಕೆಯಲ್ಲಿ ದೊಡ್ಡ ಪ್ರಚಾರವಾಗಿ ಹೋಯಿತು. ಅದೇನೋ ಹೇಳಿದಹಾಗೆ ಹುಲಿ ಬಂತು ಹುಲಿ ಬಂತು ಎಂಬುದಾಗಿ ಹೇಳುವ ರೀತಿಯಲ್ಲಿ ಇದನ್ನೇ ದೊಡ್ಡ ಪ್ರಚಾರ ಮಾಡಿದರು. ಇದೇನೂ ರಾಷ್ಟ್ರದ ಸಮಸ್ಯೆಯೇನೂ ಅಲ್ಲ, ಅಥವಾ ರಾಜ್ಯದ ಸಮಸ್ಯೆಯೂ ಅಲ್ಲ. ಈ ದೇಶದಲ್ಲಿರುವ ರೈತರ ಸಮಸ್ಯೆ ಬಗ್ಗೆ ನಾವು ಈ ಸದನದಲ್ಲಿ ಏನೇ ಪ್ರಸ್ತಾಪ ಮಾಡಿದರೂ ಕೂಡ ಆ ವರದಿಯನ್ನು ಕೊನೇ ಟಿನೇ ಪುಟದಲ್ಲಿ ಹಾಕುತ್ತಾರೆ. ಆದರೆ ಇಂತಹ ಅನಾವಶ್ಯಕವಾದ ವಿಚಾರಗಳೆಲ್ಲವೂ ಮುಖ ಪುಟದಲ್ಲೇ ಹಾಕುತ್ತಾರೆ. ಹೀಗಾದರೆ ನಾವು ಮುಟ್ಟತಕ್ಕಂತಹ ಗುರಿ ಯಾವುದು ? ಈ ತರಹದ ಅನಾವಶ್ಯಕವಾದ ವರದಿಗಳು ನಮ್ಮ ಜನಸಮುದಾಯಕ್ಕೆ ಆಗತ್ಯವೇ ? ಇದೂ ಒಂದು ಸುದ್ದಿಯೇ ? ನಾನು ಈ ಮಾತನ್ನು ಬಹಳ ಮನನೊಂದು ಹೇಳುತ್ತಿದ್ದೇನೆ. ಈ ಎರಡು ಮೂರು ದಿನಗಳ ಹಿಂದೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಮ್ಮ ಮುಂದೆ ಬೇಕಾದಷ್ಟು ಸಮಸ್ಯೆಗಳಿವೆ. ಅದೇ ರೀತಿ ನಮ್ಮ ಜನಸಮುದಾಯಕ್ಕೆ ಮಾಡಬೇಕಾದ ಕಾರ್ಯಕ್ರಮಗಳು ಯಾವ್ಯಾವು ಇವೆ, ಹಾಗೂ ನಾವು ಈ ರೀತಿಯ ಕಾರ್ಯಕ್ರಮಗಳಂ ಯಾವ್ಯಾವನ್ನು ಹಾಕಿಕೊಂಡಿದ್ದೇವೆ ಅವುಗಳು ಜನಸಾಮಾನ್ಯರಿಗೆ ತಿಳಿಯುವಂತೆ ಪತ್ರಿಕೆಯಲ್ಲಿ ಪ್ರಚಾರವಾಗಬೇಕು. ಅಂತಹವುಗಳು ಒಳ್ಳೆಯ ಪ್ರಚಾರ ಗಳೆಂದು ನಾವುಗಳೆಲ್ಲರೂ ಹೇಳುತ್ತೇವೆ. ಆದರೆ ಅದನ್ನು ಬಿಟ್ಟು. ಮುಖ್ಯ ಮಂತ್ರಿಗಳು ಯಾವ ತರಹ ಸೂಟ್ ಹಾಕಿಕೊಂಡರು, ಯಾವ ಪ್ಲೇಟಿನಲ್ಲಿ ಊಟ ಮಾಡಿದರು, ಆ ಪ್ಲೇಟ್ ಏನು ಚಿನ್ನಾದ್ದಾ ಇದನ್ನು ಯಾರು ಕೇಳುತ್ತಾರೆ ? ಆದರೆ ಪತ್ರಿಕೆಯಲ್ಲಿ ಇದನ್ನೆಲ್ಲಾ ಹಾಕುತ್ತಾರೆ. ಇನ್ನೊಂದು ನ್ಯೂಸ್ ಬಾಕಿ ಇದೆ ಅದೇನೆಂದರೆ ಹಿಂದೆ ನಾನು ಕಲರ್ ಹಾಫ್ ಶರ್ಟ್‌ನ್ನು ಹಾಕುತ್ತಿದ್ದೆ. ಈಗ ಕ್ಲೋಸ್ ಕಾಲರ್ ಸೂಟ್ ಹಾಕಿಕೊಂಡು ಒರುತ್ತಿದ್ದಾರೆ ಅಂತ ಒಂದು ನ್ಯೂಸನ್ನು ಹಾಕಿಬಿಟ್ಟರೆ ..... ಆದೂ ಒಂದು ನ್ಯೂಸ್ ಆಗುತ್ತದೆ.

ಶ್ರೀ ಜೆ.ಎಚ್. ಪಟೇಲ್.—ಈ ಕಾರಿನ ವಿಚಾರ ಪತ್ರಿಕೆಯಲ್ಲಿ ಏಕೆ ಬಂತು ಎಂದರೆ, ಆದು ನಿಮಗಿಂತ ಹಿಂದಿನ ಮುಖ್ಯ ಮಂತ್ರಿಗಳು ಅಂತಹ ಕಾರನ್ನು ಉಪಯೋಗಿಸಿರಬಹುದು. ಆದರೆ ಇಂದಂ ಒಂದು ಎತ್ತಿನ ಗಾಡಿಯನ್ನು ಕೊಳ್ಳುವುದಕ್ಕೂ ಯೋಗ್ಯತೆ ಇಲ್ಲದೇ ಇರತಕ್ಕಂತಹ ಲಕ್ಷಾಂತರ ರೈತರು ನಮ್ಮ ರಾಜ್ಯದಲ್ಲಿದ್ದಾರೆ. ಇಂತಹ ಸಮಯದಲ್ಲಿ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳತಕ್ಕಂತಹ ಕಾರನ್ನು ತೆಗೆದುಕೊಂಡಿದ್ದರಿಂದ ಅದೂ ಒಂದು ನ್ಯೂಸ್ ಆಗಿರುತ್ತದೆ. ಇಂದಿನ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾನು ನೋಡಿದಹಾಗೆ ಶ್ರೀಮತಿ ಇಂದಿರಾಗಾಂಧಿಯವರು ಅಂಬ್ಯಾಸಿಡರ್ ಕಾರಿನಲ್ಲಿ ಓಡಾಡಿದ್ದನ್ನು ನಾನು ನೋಡಿದ್ದೇನೆ. ಆದೂ ತಮಗೂ ಗೊತ್ತಿದೆ.

ಶ್ರೀ ಆರ್ ಗುಂಡೂರಾವ್.—ಅದನ್ನೇ ನಾನು ಹೇಳುತ್ತಿರುವುದು. ಎತ್ತಿನ ಗಾಡಿಯಲ್ಲಿ, ಮತ್ತು ಸೈಕಲ್ ಮೇಲೆ ಹೋಗುತ್ತೇವೆಂದು ಅವರು ಹೇಳಿದರು. ಆದರೆ ಯಾರು ಹಾಗೆ ಮಾಡಲಿಲ್ಲ. ಪ್ರತಿ ಸಾರಿ ಹೊಸ ಹೊಸ ಬೆಂಜ್ ಕಾರುಗಳನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ೧೯೭೨ನೇ ಇಸವಿಯಲ್ಲಿ ಅವರು ಮುಖ್ಯ ಮಂತ್ರಿಯಾದರು, ಆಗ ಒಂದು ಹೊಸ ಬೆಂಜ್ ಕಾರು ಬಂತು. ೧೯೮೦ನೇ ಇಸವಿಯಲ್ಲಿ ನಾನು ಮುಖ್ಯ ಮಂತ್ರಿಯಾದೆ, ನನಗೂ ಒಂದು ಬೆಂಜ್ ಕಾರು ಬಂತು. ೧೯೭೨ನೇ ಇಸವಿಯಲ್ಲಿ ಬಂದಂತಹ ಬೆಂಜ್ ಕಾರಿಗೂ, ಈಗ ಬಂದಿರುವ ಬೆಂಜ್ ಕಾರಿಗೂ ಯಾವುದೇ ವ್ಯತ್ಯಾಸ ಇಲ್ಲ. ಆದರೆ ಇದನ್ನೇ ನ್ಯೂಸ್ ಮಾಡುವ ಬದಲಾಗಿ, ಸಮಾಜಕ್ಕೆ ಅನುಕೂಲವಾಗತಕ್ಕಂತಹ ವಿಷಯಗಳನ್ನು ಪತ್ರಿಕೆಯಲ್ಲಿ ಬರೆದರೆ ಒಳ್ಳೆಯದು. ಆ ಒಡ ರೈತನಿಗೆ, ಮಂತ್ರಿ ಯಾವ ಕಾರಿನಲ್ಲಿ ಹೋಗುತ್ತಾರೆ, ಮುಖ್ಯ ಮಂತ್ರಿ ಯಾವ ಕಾರಿನಲ್ಲಿ ಓಡಾಡುತ್ತಾರೆ ಎಂಬುದನ್ನು ಕಟ್ಟಿಕೊಂಡು ಆತನಿಗೇನಾಗಬೇಕಾಗಿದೆ. ಆತನು ಕೇಳುವುದಕ್ಕೂ ಬರುವುದಿಲ್ಲ. ಆದರೆ ಇಂಥ ಕೆಲಸ ಮಾಡಿಕೊಡು ಅಂತ ಕೇಳುತ್ತಾನೆ ಅಷ್ಟೆ. ಆದ್ದರಿಂದ ನಾನು ತಮ್ಮ ಮೂಲಕ ಈ ರೀತಿಯ ಕೆಲಸವನ್ನು ಯಾರು ಮಾಡುತ್ತಿದ್ದಾರೆ, ಅಂದರೆ ರಿಪೋರ್ಟರ್‌ರೋ ಅಥವಾ ಎಡಿಟರ್‌ರೋ ಅಥವಾ ಪತ್ರಿಕೆಯ ಮಾಲೀಕರೋ ಯಾರು ಇದ್ದಾರೆ, ಅವರು

ಇದನ್ನು ತಿಳಿದುಕೊಂಡು ಸರಿಪಡಿಸಿಕೊಳ್ಳಲಿ ಅಂತ ನಾನು ಹೇಳುತ್ತಿದ್ದೇನೆ. ಈ ರೀತಿಯಿಂದ ಯಾರಿಗೂ ಆತ್ಮ ತೃಪ್ತಿಯಾಗುವುದಿಲ್ಲ. ಅದನ್ನು ಬಿಟ್ಟು ಪತ್ರಿಕೆಯಲ್ಲಿ ಈ ರೀತಿ ಬರೆಯುವುದರಿಂದ ಇತಕ್ಕಂಥ ಸಮಸ್ಯೆ ಬಗೆಹರಿಯುತ್ತದೇನು ? ಇವತ್ತಿನ ದಿವಸ ನಮ್ಮ ಮುಂದೆ ಬೇಕಾದಷ್ಟು ಸಮಸ್ಯೆಗಳಿವೆ. ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೋಸ್ಕರ ಇತ್ತು ಆಡಳಿತದಲ್ಲಿ ಏನಾದರೂ ದೋಷವಿದ್ದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರುವ ಸಂದ್ದಿ ಇದ್ದರೆ, ಅದರಿಂದ ರಾಜ್ಯಕ್ಕೂ ಒಳ್ಳೆಯದಾಗುತ್ತದೆ. ಅವರಿಗೂ ಒಳ್ಳೆಯದಾಗುತ್ತದೆ. ಮತ್ತು ಸರ್ಕಾರ ಇಂತಹ ತಪ್ಪನ್ನು ತಿದ್ದಿಕೊಂಡು ಜನರಿಗೆ ಅನುಕೂಲವಾಗುವ ಕೆಲಸವನ್ನು ಮಾಡುವುದಕ್ಕೂ ಅನುಕೂಲವಾಗುತ್ತದೆ. ಕಾರು ಮತ್ತು ಅನಾವಶ್ಯಕ ವಿಚಾರಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿದ್ದರಿಂದ ನಾನು ಇಷ್ಟೆಲ್ಲಾ ವಿಚಾರಗಳನ್ನೂ ಹೇಳಬೇಕಾಯಿತು. ಮುಖ್ಯ ಮಂತ್ರಿ ಬೆಂಜ್ ಕಾರು ತೆಗೆದುಕೊಂಡು ಯಾವ ಪ್ಲೇಟಿನಲ್ಲಿ ಊಟ ಮಾಡಿದ, ಯಾವ ರೀತಿಯ ಸೂಟು ಹಾಕಿದ, ಕೂಡತಾ ಹಾಕಿದ, ಇವನ್ನೆಲ್ಲಾ ಬರೆದರೂ ಕೂಡ ಅವರು ಪಂಚಾಯಿತ ಸದಸ್ಯರಾಗುವುದಕ್ಕೂ ಆಗಲಿಲ್ಲ. ಆ ಪ್ರಶ್ನೆ ಬೇರೆ. ಆದರೆ ಈ ರಾಜ್ಯಕ್ಕೆ ಆಗಬೇಕಾದುದು ಏನು ಎಂಬುದನ್ನು ಮೊದಲು ನೋಡಬೇಕಾಗಿದೆ. ಆದ್ದರಿಂದ ಈ ರೀತಿ ಅನಾವಶ್ಯಕವಾದ ವಿಚಾರಗಳನ್ನು ಪತ್ರಿಕೆಯಲ್ಲಿ ಬರೆಯುತ್ತಿರ ತಕ್ಕಂತಹ ಆಡಳಿತ ಮಾಲೀಕರು ಯಾರಿದ್ದಾರೆ, ಈ ಒಂದು ಕೆಲಸದಲ್ಲಿ ಟ್ರೈನಿಂಗ್ ಯಾರು ಮಾಡಿಕೊಂಡಿದ್ದಾರೆ ಅವರು ಸರಿಯಾಗಿ ತಿಳಿದುಕೊಂಡು ರಾಜ್ಯಕ್ಕೆ ಹಾಗು ಜನತೆಗೆ ಅನುಕೂಲವಾಗುವ ಸಮಸ್ಯೆಗಳ ಬಗ್ಗೆ ಬರೆಯಲಿ ಎಂಬುದಾಗಿ ನಾನು ತಮ್ಮ ಮೂಲಕ ಆಪರಿಗೆ ತಿಳಿಸುತ್ತಿದ್ದೇನೆ. ಮತ್ತೆ ಇಷ್ಟೇ ಅಲ್ಲ. ರೈತರಿಗೆ ನಿಜವಾಗಿಯೂ ತೊಂದರೆಯಾಗಿದ್ದರೆ ಅದನ್ನು ನಿವಾರಣೆ ಮಾಡುವುದಕ್ಕಾಗಿ ನಾವು ನೀವೂ ಕುಳಿತು ಚರ್ಚೆ ಮಾಡಿ ಪರಿಹರಿಸೋಣ. ಆಮೇಲೆ ತಾವು ಈ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಹೇಳಿದ್ದೀರಿ, So far as Navalgund and Nargund is concerned Government has agreed to hold judicial enquiry. There is no second thought about it. ಬೇರೆ ಇನ್ಸ್‌ಟೆನ್ಸ್‌ಸ್ ಕೂಡ ತಾವು ಹೇಳಿದ್ದೀರಿ. ಅದರ ಬಗ್ಗೆ ನಾನು ವಿಚಾರಣೆ ಮಾಡಿಸುತ್ತೇನೆ ಸೂಕ್ತವಾದ ವಿಚಾರಣೆಯನ್ನು ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಅಲ್ಲಿ ಏನು ನಡೆದಿದೆ ಅದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ನನ್ನ ವಿರೋಧ ಇಲ್ಲ. ಅದರ ಬಗ್ಗೆ ಸರ್ಕಾರ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತೆ ಆ ಬಗ್ಗೆ ಕಮಿಟಿಯನ್ನು ಮಾಡುವುದಕ್ಕೂ ನಾನು ಒಪ್ಪಿದ್ದೇನೆ.

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರುಗಳು ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಆಜೀಜ್ ಶೇಠ್.—ಅವರು ಚರ್ಚೆ ಮಾಡಿರುವುದು ಗೊತ್ತಿದೆ. ಆದರೆ ಅವರು ಚರ್ಚೆ ಮಾಡಿ ಏನು ತೀರ್ಮಾನ ಮಾಡಿದ್ದಾರೆಂಬುದು ಸಭೆಗೆ ಗೊತ್ತಾಗಬೇಕಲ್ಲ.

ಶ್ರೀ ಆರ್. ಗುಂಡೂರಾವ್.—ರೈತರಿಗೆ ರಿಲೀಫ್ ಕೊಡುವ ಬಗ್ಗೆ ನಾಳೆ ಅನೌನ್ಸ್ ಮಾಡುತ್ತೇನೆಂದು ನಾನು ಹೇಳಿದ್ದೇನೆ. ಶ್ರೀ ಜೆ. ಎಚ್. ಪಟೇಲ್‌ರವರು ಅವತ್ತು ವೀಟಿಂಗ್‌ಗೆ ಬಂದಿದ್ದರು ಆದರೆ ಇವತ್ತು ಬಂದಿರಲಿಲ್ಲ. ಇನ್ನು ನಿಮ್ಮ ಡಿಮ್ಯಾಂಡ್ ನಂ. ೨ರಲ್ಲಿ ಏನಿದೆ, ಅಂದರೆ ಕಳ್ಳಸಾಗಾಣಿಕೆದಾರರು ಮತ್ತು ಕಾಳಸಂತೆಕೋರರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದೀರಿ. ಅದನ್ನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ನಾವು ಈಗಾಗಲೇ ಪಿ.ಡಿ. ಆಕ್ಟ್ ಕೆಳಗೆ ಹಲವಾರು ಕೇಸುಗಳನ್ನು ಹಾಕಿದ್ದೇವೆ. ಆದರೆ ಅವರಲ್ಲಿ ಕೆಲವು ಜನ ಹೈಕೋರ್ಟಿಗೆ ಅಪೀಲ್ ಹಾಕಿ, ಬೈಲ್ ಮೇಲೆ ರಿಲೀಜ್ ಆರ್ಡರ್ ತೆಗೆದುಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ಸೂಕ್ತವಾದ ತಿದ್ದುಪಡಿಯನ್ನು ತರಬೇಕೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಈ ಕಾನೂನಿಗೆ ತಿದ್ದುಪಡಿ ಆಗಬೇಕಾದರೆ ಲೋಕಸಭೆಯಲ್ಲಿ ತಿದ್ದುಪಡಿಯನ್ನು ತರಬೇಕಾಗುತ್ತದೆ. ಲೋಕಸಭೆಯಲ್ಲಿ ಒಂದು ತಿದ್ದುಪಡಿಯನ್ನು ತರಬೇಕಾದರೆ ಎಷ್ಟು ಕಷ್ಟ ಇದೆ ಎಂಬುದು ತಮಗೂ ಗೊತ್ತಿದೆ. ನಾನು ಇದರ ಬಗ್ಗೆ ನಾಳೆ ಆಗಸ್ಟ್ ೧೧ ರಂದು ಮುಖ್ಯಮಂತ್ರಿಗಳ ಸಮ್ಮೇಳನಕ್ಕೆ ದೆಹಲಿಗೆ ಹೋದಾಗ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅದೂ ಅಲ್ಲದೆ ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಜೊತೆಗೂ ಹಾಗೂ ಪ್ರಧಾನ ಮಂತ್ರಿಗಳ ಜೊತೆಗೂ ಸಮಾಲೋಚನೆ ಮಾಡಿ, ಈ ಕಾನೂನಿನಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ತಿದ್ದುಪಡಿ ಅವಶ್ಯಕವೆಂದು ಅವರ ಅವಗಾಹನೆಗೆ ತರುತ್ತೇನೆ.

SRI M. C. NANAIAH.—Sir, the Deputy Commissioners are the authorities. In many cases they are not following the procedure laid down in the Act. They may be instructed to follow the procedural matters.

SRI R. GUNDU RAO.—I quite agree with what hon.Member Sri M.C. Nanaiah has said just now. He is a very intelligent lawyer.

SRI M.C. NANAIAH.—I had the privilege of being the Legal Adviser to the Hon'ble Chief Minister while he was Municipal Chairman.

SRI R. GUNDU RAO —Not only that. Hon.Member Sri Nanaiah was also my personal Advocate. There is force in what he has said I will give instructions to the concerned. ಇನ್ನು ಹೌಸ್ ಕಮಿಟಿಯ ಬಗ್ಗೆ ಎರಡು ಸದನಗಳ ಪಾಗೂ ಎರಡೂ ಕಡೆಯ ಮಾನ್ಯ ಸದಸ್ಯರುಗಳು ಕೂಡಿರುವಂತಹ ಸಮಿತಿಯನ್ನು ನಾವು ಏನು ರಚನೆ ಮಾಡುತ್ತೇವೆ. ಆ ಸಮಿತಿಯವರು ಆ ಭಾಗಕ್ಕೆ ಕಳುಹಿಸಿ, ಅಲ್ಲಿ ಏನೇನು ವಾತಾವರಣ ಇದೆ, ಏನು ಅನ್ಯಾಯವಾಗಿದೆ. ಅದನ್ನು ಸ್ಪಡೀ ಮಾಡಿ, ಸರ್ಕಾರ ಕೂಡಲೇ ಏನು ಕ್ರಮ ಕೈಗೊಳ್ಳಬೇಕು, ಅದರ ಬಗ್ಗೆ ಏನು ವರದಿ ಬರುತ್ತದೋ ಅದನ್ನು ಸರ್ಕಾರ ಒಪ್ಪುವುದಕ್ಕೆ ತಯಾರಾಗಿದೆ. ಈ ಮಾತನ್ನು ಆವತ್ತೂ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ. ನಾಳೆಯೂ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ನಾಳೆಯೇ ಅನೌನ್ಸ್ ಮಾಡಿ.

ಶ್ರೀ ಆರ್. ಗುಂಡೂರಾವ್.—ನೀವು ಹಿಂದೆ ಅಧಿಕಾರದಲ್ಲಿದ್ದಂತಹ ಕಾಲದಲ್ಲಿ ಒಂದೊಂದು ಸಮಿತಿಯನ್ನು ರಚನೆ ಮಾಡಬೇಕಾದರೆ ಮೂರು ಮೂರು ತಿಂಗಳು, ಆರಾರು ತಿಂಗಳು ತೆಗೆದುಕೊಳ್ಳುತ್ತಿದ್ದರಿ. ಆದರೆ ನಾನು ಅದನ್ನು ನಾಳೆಯೇ ಅನೌನ್ಸ್ ಮಾಡುತ್ತೇನೆ. ಅದಕ್ಕೇನೂ ಕಷ್ಟ ಇಲ್ಲ.

೧೨-೩೦ ಪಿ.ಎಂ.

ಇನ್ನು ಮಾನ್ಯ ಅಡ್ವೋಕೇಟ್ ಆವರು ಕೆಂಪು ಬಣ್ಣದ ಬೆಂಜ್ ಕಾರು ತೆಗೆದುಕೊಂಡಿದ್ದಾರೆ. ಅವರು ಕಲರ್ ಎಕ್ಸ್‌ಚೇಂಜ್ ಮಾಡುತ್ತಾರೆಂದು ಕಾಣುತ್ತದೆ.

ಅಧ್ಯಕ್ಷರು,—ಮಾನ್ಯ ಅಡ್ವೋಕೇಟರು ಸ್ವಸ್ಥಾನದಲ್ಲಿಂದ ಮಾತನಾಡುತ್ತಿಲ್ಲವಾದ್ದರಿಂದ ಅವರ ಮಾತುಗಳನ್ನು ರೆಕಾರ್ಡ್ ಮಾಡಲಾಗುವುದಿಲ್ಲ.

ಶ್ರೀ ಕ.ಎಚ್. ಶ್ರೀನಿವಾಸ್.—ಅವರು ರೆಕಾರ್ಡ್ ಆಗುವಂತಹ ಮಾತನ್ನೇ ಮಾತನಾಡುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಕ್ಯಾ ಐಸೇ ಬೋಲ್ತಾ ಹೈ, ಕ್ಯಾ ಕರೆ ಸಾಬ್.

(ನ ಗು)

ಇನ್ನು ವಿಷಯಕ್ಕೆ ಬರೋಣ. ಪೋಲೀಸ್ ಫೋರ್ಸ್ ಜಾಸ್ತಿ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಎಲ್ಲಿ ಗಲಾಟೆ ಇರುತ್ತದೋ ಅಲ್ಲಿ ಪೋಲೀಸಿನವರು ಇರಲೇ ಬೇಕಾಗುತ್ತದೆ. ಹಿಂಸೆಯ ವಾತಾವರಣ ಎಲ್ಲಿ ಇರುತ್ತದೋ ಅಲ್ಲಿ ಪೋಲೀಸ್‌ರನ್ನು ಜಾಸ್ತಿ ಸಂಖ್ಯೆಯಲ್ಲಿ ಹಾಕಲಾಗುತ್ತದೆ. ಅಲ್ಲಿ ಶಾಂತಿ ವಾತಾವರಣ ಮೂಡಿದ ಮೇಲೆ ಅವರು ಆ ಜಾಗಗಳಲ್ಲಿ ಇರುವುದಿಲ್ಲ. We shall see that normalcy is restored.

SRI K.H. SRINIVAS.—Indiscriminate use of police force should be avoided.

SRI R. GUNDU RAO.—Why should we use ? Nobody will like to use police force unnecessarily. The question comes only when all efforts fail and then only police force will be used. Otherwise why we should use ? ನಂತರ ಪೋಲೀಸಿನವರು ಶಾಂತಿಯಿಂದ ವರ್ತಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. That is what I said on that day. Already we have informed the department sconcerned that they should be very calm and listen to people about their grievances and they must keep the Government informed about it. ಪೋಲೀಸಿನವರು ಪೂರ್ತಿ ಸಮಾಧಾನದಿಂದ ಸಂಯಮದಿಂದ ಇದ್ದು ಸಹಾಯ ಮಾಡಬೇಕಾಗುತ್ತದೆ. ಜನತೆಗೆ ಬುದ್ಧಿವಾದವನ್ನು ಹೇಳಬೇಕಾಗುತ್ತದೆ. ಕೊನೆಗೆ ಹದ್ದು ಮೀರಿದರೆ, again I will inform them to minimise the whole thing.

SRI K.H. SRINIVAS.—While you are very keen to keep the morale of the police, and they seem to have gained the impression that they will be appeasing the Government by taking unnecessary indiscriminate and repressive steps on the ryots, they must be told very clearly and in unequivocal terms that it is not the intention of the Government and that they should behave with restraint.

ಶ್ರೀ ಬಿ.ವಿ. ಕಕ್ಕಿಲಾಯ.—ಬಲೆ ವಿರಿಕೆಯನ್ನು ಹತೋಟಿಗೆ ತರಲಾಗುತ್ತದೆಂಬುದರ ಬಗ್ಗೆ ಅವರು ಒಪ್ಪಿಕೊಂಡಿದ್ದೇವೆಂದರು. ಈಗ ಸಣ್ಣ ಸಣ್ಣ ಮಾರಾಟಗಾರರು, ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತಾರೆಯೇ ಹೊರತು ದೊಡ್ಡ ದೊಡ್ಡ ಹೋಲ್ಸೇಲ್ ಮಾರಾಟಗಾರರು, ಬ್ಲಾಕ್ ಮಾರ್ಕೆಟಿಯರ್ಸ್ ಯಾರು ಇದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತಾ ಇಲ್ಲ. ಈ ಬಗ್ಗೆ ನಾನು ಕೆಲವು ನಿದರ್ಶನಗಳನ್ನು ಬೇಕಾದರೆ ಕೊಡಬಲ್ಲೆ. ಮೊನ್ನೆ ಚಳುವಳಿ ನಡೆದಾಗಲೂ ಕೂಡ ಇಂತಹವರ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಚಳುವಳಿ ಹತೋಟಿಗೆ ಬಂದು ಶಾಂತಿ ವಾತಾವರಣ ಮೂಡುತ್ತಿತ್ತೆಂದು ನಾನು ಈ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಈ ವಿಷಯದ ಬಗ್ಗೆ ಚರ್ಚೆ ಅನಾವಶ್ಯಕವೆನಿಸುತ್ತಿದೆ. ನಮ್ಮ ಡಿಮ್ಯಾಂಡ್‌ಗಳಿಗೆ ಅವರು ಒಪ್ಪಿರುವುದರಿಂದ ಈ ಬಗ್ಗೆ ಕ್ಲಾರಿಫಿಕೇಷನ್ ಅನಾವಶ್ಯಕವೆಂದು ನನಗನ್ನಿಸುತ್ತಿದೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಬಿ.ವಿ. ಕಕ್ಕಿಲಾಯ ಅವರು ಹೊಲ್ಸೇಲ್ ಡೀಲರ್ಸ್, ಹಾಗೂ ಬ್ಲಾಕ್ ಮಾರ್ಕೆಟಿಯರ್ಸ್ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲವೆಂದು ಹೇಳಿದರು. ಈಗ ಏನಾಗಿದೆ ಎಂದರೆ ಯಾರು ದೊಡ್ಡ ದೊಡ್ಡ ಸ್ಟಾಕ್ ಇಟ್ಟುಕೊಂಡಿರುತ್ತಾರೆ ಅವರು ಎಲ್ಲಾ ಸ್ಟಾಕನ್ನು ತಮ್ಮ ಅಂಗಡಿಗಳಲ್ಲಿ ಇಟ್ಟುಕೊಂಡಿರುವುದಿಲ್ಲ, ಅದನ್ನು ಬೇರೆ ಬೇರೆ ಚಿಕ್ಕ ಚಿಕ್ಕ ಅಂಗಡಿಗಳಲ್ಲಿ ೫೦ ಮೂಟೆ, ೭೦ ಮೂಟೆ ಪ್ರಕಾರ ಇಟ್ಟು ಸಾಗಾಕಿ ಬಿಡುತ್ತಾರೆ. Perhaps, Mr. Arumugham must be knowning in K.G.F. They do not stock in one place. They will distribute the whole thing to small shops. ಆಗ ಆ ದೊಡ್ಡ ದೊಡ್ಡ ದಾಸ್ತಾನುಗಾರರ ಅಂಗಡಿಗೆ ಹೋದರೆ ಸಿಕ್ಕುವುದು ಬರೀ ೨೦ ಅಥವಾ ೩೦ ಮೂಟೆಗಳು ಮಾತ್ರ. ಆದ್ದರಿಂದ ಬೇರೆ ಅಂಗಡಿಗಳಿಗೂ ರೈಡ್ ಮಾಡಿದರೆ ಇವರು ಸಿಕ್ಕಿಕೊಳ್ಳುತ್ತಾರೆ. Let us not worry about those things. In toto I agree with you.

ಇನ್ನು ಬೇಡಿಕೆಯ ಪಟ್ಟಿಯಲ್ಲಿ ಇರುವ ಶಿನೇ ವಿಷಯದ ಬಗ್ಗೆ ಹೇಳಬೇಕೆಂದರೆ ಆಲ್ಲಿಗೆ ಮಲಪ್ರಭಾ ಕ್ಕೆ ಸಮಿತಿಯವರು ಹೋಗಿ ನೋಡಿಕೊಂಡು ಬರಬೇಕೆಂದು ಹೇಳಿದ್ದಾರೆ. ಇದೊಂದೇ ಕಡೆ ಅಲ್ಲ, ಬೇರೆ ಕಡೆ ಕೂಡಾ ಅಂದರೆ ಘಟಪ್ರಭಾ ಮುಂತಾದ ಇನ್ನಿತರ ಕಡೆಗಳಲ್ಲಿಯೂ ಇಂತಹ ಪರಿಸ್ಥಿತಿ ಬಂದ ಪಕ್ಷದಲ್ಲಿ ಸಮಿತಿಯವರು ಹೋಗಿ ನೋಡಿಕೊಂಡು ಬಂದ ಮೇಲೆ ವರದಿ ಕೊಟ್ಟ ನಂತರ ನಾವು ಆ ಬಗ್ಗೆ ವಿಚಾರ ಮಾಡಬಹುದು. We will give relief. After all we are there to help them. I also agree that a team of legislators from both the Houses be formed

to give suggestions on relief measures. We will never keep any one unnecessarily in police custody, just because to merely keep him.

ಇನ್ನು ಏನೆಯು ಬೇಡಿಕೆ ಏನಿದೆ ಅದನ್ನು ನಾನು ಆಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. It is an administrative set-up. Can I include a Minister on their advise of my friends to drop a Minister on their advice ? ಯಾರೋ ಹಿಂದಿನ ಮುಖ್ಯಮಂತ್ರಿಗಳು ಹಾಗೆ ಮಾಡಿದ್ದಾರೆಂದು ನಾನು ಹಾಗೆ ಮಾಡುವುದಕ್ಕಾಗುವುದಿಲ್ಲ. It is the prerogative of the Chief Minister to keep a Minister or to drop a minister. Suppose I feel that a minister is not useful to the administration. I can drop him; if I feel that the concerned Minister is useful, I can retain him. Because Mr. Basavalingappa was not found to be useful, when he was minister for Municeipal Administration, he as dropped. Again he was taken back and he became the minister. Mr. Azeez Sait was also dropped like that. ಮಂತ್ರಿಗಳು ಹೊಂದಿರತಕ್ಕ ಖಾತೆಗಳು ಬದಲಾವಣೆಯಾಗುತ್ತಿರುತ್ತವೆ. ನಾನೂ ಕೂಡ ಮಂತ್ರಿಯಾಗಿದ್ದಾಗ ನನ್ನ ಖಾತೆಗಳನ್ನೂ ಸಹಾ ಬದಲಾವಣೆ ಮಾಡಲಾಯಿತು. The then Chief Minister had once said that Mr. Basavalingappa was doing an excellent work. But after six months he was dropped.

SRI K.H. SRINIVAS.—We did not question the prerogative of the Chief Minister to keep or drop the ministers. We have the least intention to meddle with it. We have told you frankly, according to us, people at large have been voicing. We have said that in your own interest and in the interest of the administration he must be dropped. If the Chief Minister is not convinced, there is already a motion tabled in that regard. While discussing that Motion we shall impress upon the Chief Minister why this should be done.

SRI R. GUNDU RAO —I am not coming in the way of your Motion now. I am only referring to your demand about the droping of the Minister. You leave the matter to me. It is completely handled by me.

M.C. NANAIAH.—Our anxiety is to tell you the background.

ಶ್ರೀ ಆರ್. ಗುಂಡೂರಾವ್.—ಆದುದರಿಂದ ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರ ವಿರೋಧ ಇಲ್ಲ ಎಂದು ನನಗೆ ಕಾಣುತ್ತಿದೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮುಖ್ಯಮಂತ್ರಿಯವರು ರೈತರ ಗೋಳಿನ ವಿಷಯವನ್ನು ವಿಷದವಾಗಿ ಹೇಳಿದ್ದಾರೆ. ಈಗ ನಾವು ಕೊಟ್ಟಿರುವ ಬೇಡಿಕೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿರುತ್ತಾರೆ. ನೂರಾರು, ಸಾವಿರಾರು ಬಡ ಜನರಿಗೆ ಕೊಟ್ಟಿರತಕ್ಕಂತಹ ಜಮೀನನ್ನು ಕೈ ಬಿಡಿಸುವುದು, ಅವರಿಗೆ ಹಿಂಸೆ ಕೊಡುವುದು, ಅವರ ಮೇಲೆ ದಬ್ಬಾಳಿಕೆಯನ್ನು ಮಾಡುವುದು ಇಂತಹ ಹಾವಳಿಗಳು ಧನಿಕರಿಂದ ಇವರ ಮೇಲೆ ನಡೆಯುತ್ತಿರುವುದು ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆಯೆಂದು ನನ್ನ ಭಾವನೆ. ಇಂತಹ ನೂರಾರು ಕೇಸುಗಳು ಇವೆ. ಇವರಿಗೆಲ್ಲಾ ನ್ಯಾಯವನ್ನು ದೊರಕಿಸಿಕೊಡ

ಬೇಕಾಗುತ್ತದೆ. ಬಹಳ ಜನ ಭೂಮಿ ಇಲ್ಲದವರಲ್ಲಿ ಹರಿಜನ ಗಿರಿಜನರು ಇದ್ದಾರೆ. ಆ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಟ್ಟು ಅವರಿಗೆ ಸಲಹೆ ಹಾಗೂ ಸಮಜಾಯಿಸಿ ಕೊಡಬೇಕೆಂದು ಈ ಮೂಲಕ ಕೇಳಿ ಕೊಳ್ಳುತ್ತಿದ್ದೇನೆ.

PAPERS LAID ON THE TABLE

SRI M. VEERAPPA MOILY (Minister for Finance).--On behalf of the Hon. Minister for Revenue and Agriculture, I beg to lay ;

i. Notification No. RD 29 TRM 1980, dated 18th July, 1980. Remission of Land Revenue in respect of two villages of Sagar Taluk, Shimoga District for the year 1979-80.

ii Notification No. RD 28 TRM 1980, dated 17th July,1980. Remission of Land Revenue in respect of Alavalli village of Hosanagar Taluk, Shimoga District for the year 1979-80. Under Section 194 (2) of the Karnataka Land Revenue Act, 1964.

2. SRI M. VEERAPPA MOILY (Minister for Finance) — Sir, I beg to lay :

21st Annual Report and Accounts of the Karnataka State Financial Corporation, Bangalore for the year 1979-80.

Under Section 38 (5) of State Financial Corporation's Act, 1951.

3. SRI DHARMA SINGH(Minister for Housing and Urban Development) .— Sir, I beg to lay ;

Notification No. HUD 81 LRB 79 dated 20th June, 1980. The Karnataka Municipalities(President and Vice-President) Election (Amendment) Rules, 1980
Under Section 323 (3) of the Karnataka Municipalities Act, 1964.

4. SRI M.VEERAPPA MOILY(Minister for Finance). Sir, on behalf of the Minister for Labour, Small Scale Industries and Wakfs, I beg to lay —

i Annual Report for the year 1976-77 and Audit Report for the year 1975-76 of the Karnataka State Khadi and Village Industries Board, Bangalore.

ii Annual Report for the year 1977-78 and Audit Report for the year 1976-77 of the Karnataka State Khadi and Village Industries Board, Bangalore.

Under Section 26 of the Karnataka Khadi and Village Industries Act, 1956.